# ಕೆ. ಕೆ. ಹೆಬ್ಬಾರ್

ಎನ್. ಮರಿಶಾಮಾಚಾರ್

ಕೆ. ಕೆ. ಹೆಬ್ಬಾರ್
JNANA001770



K. K. HEBBAR -N. Marishamachar

ಸುವರ್ಣ ಕರ್ನಾಟಕ ೨೦೦೭



# ಕೆ. ಕೆ. ಹೆಬ್ಬಾರ್

ಎನ್. ಮರಿಶಾಮಾಚಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು ೫೬೦೦೦೨

**K.K. HEBBAR**
A Biography by **N. Marishamachar**
Published by **V. N. Mallikarjuna Swamy**, *Registrar*
Karnataka Lalithakala Academy, Kannada Bhavana
J.C. Road, Bengalooru - 560002. Tel.: 080-22480297

General Editor : **S. N. Chandrashekar**

Translated : **H.A. Anilkumar**

Revised Edition : 2008

Pages : 82

Price : 100=00

ಹಕ್ಕುಗಳು: ಲೇಖಕರದು

ಅನುವಾದ : **ಎಚ್.ಎ. ಅನಿಲ್‌ಕುಮಾರ್**

ಪರಿಷ್ಕೃತ ಮುದ್ರಣ : ೨೦೦೮
ಪುಟಗಳು : ೮೨
ಬೆಲೆ : ೧೦೦-೦೦

*ಪ್ರಕಾಶಕರು:*
**ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ**
*ರಿಜಿಸ್ಟ್ರಾರ್*, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨

*ಮುಖಪುಟ ವಿನ್ಯಾಸ:* ಬಿ.ಎಲ್. ನರಸಿಂಹಮೂರ್ತಿ

*ಡಿ.ಟಿ.ಪಿ. ಹಾಗೂ ಮುದ್ರಕರು:*
**ಯಶಸ್ವಿ ಪ್ರಿಂಟ್ ಆಡ್ಸ್**
#86, 2ನೇ ಅಡ್ಡ ರಸ್ತೆ, ಕಾವೇರಿಪುರ
ಕಾಮಾಕ್ಷಿಪಾಳ್ಯ, ಬೆಂಗಳೂರು 560 079
✆ 23583831 Mobile 9448373577
email : yashasviads@yhaoo.co.in

# ಅಧ್ಯಕ್ಷರ ಮಾತು

ಕರ್ನಾಟಕ ಲಲಿತಾಕಲಾ ಅಕಾಡೆಮಿಯು ಕಳೆದ ನಲವತ್ತಮೂರು ವರುಷಗಳಿಂದ ಲಲಿತಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ "ಕಲಾವಿದರ ಮಾಲೆ" ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತಾ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನು ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ **"ಕೆ. ಕೆ. ಹೆಬ್ಬಾರ್"** ಅವರ ಪುಸ್ತಕವು ಜೀವನ ಮತ್ತು ಸಾಧನೆಗಳನ್ನು ಪರಿಚುಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು ಪ್ರಸ್ತುತ ಕಲಾವಿದ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಈ ಕಲಾವಿದರ ಸಮಗ್ರ ಪರಿಚಯವು ಈ ಪುಸ್ತಕವು ಓದುಗರ ಗಮನಕ್ಕೆ ತರುತ್ತದೆ ಎಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ದಪಡಿಸಿ ಓದುಗರ ಕೈಗಿತ್ತಿದ್ದೇವೆ. ಎಂದಿನಂತೆ ಕಲಾಸಕ್ತರು, ಕಲಾಇತಿಹಾಸ ಪ್ರೇಮಿಗಳೂ ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶೀಸಲಾಗಿದೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಯಶಸ್ವಿ ಪ್ರಿಂಟ್ ಅಡ್ಸ್‌ನ ಮಾಲೀಕರಾದ ಶ್ರೀಮತಿ ವೀಣಾ ಎನ್. ಮೂರ್ತಿ ಅವರಿಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೂ ನನ್ನ ಕೃತಜ್ಞತೆಗಳು.

**ವಿ.ಟಿ. ಕಾಳೆ**

*ಅಧ್ಯಕ್ಷರು*

ಕರ್ನಾಟಕ ಲಲಿತಾಕಲಾ ಅಕಾಡೆಮಿ

## ಮೊದಲನೇ ಆವೃತ್ತಿಯ ಮೊದಲ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವುದು ಒಂದು. ಈ ಪುಸ್ತಕಗಳು ಈ ಹೆಸರಾಂತ ಕಲಾವಿದರು. ಅದರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಕಲೆಯು ಬಂದ ದಾರಿ ಮತ್ತು ಅದರ ಚರಿತ್ರೆಯ ತಿಳುವಳಿಕೆ ಉಂಟುಮಾಡಲು ಸಹಾಯಕವಾಗಲು ಸಾಕು.

ಈ ಯೋಜನೆಯಲ್ಲಿ ಈಗಾಗಲೇ ಹತ್ತು ಹೊತ್ತಿಗೆಗಳು ಹೊರ ಬಂದಿವೆ. ಈಗ, 1986–87ರ ಸಾಲಿನಲ್ಲಿ ಈಗಾಗಲೇ ಮೂರು ಹೊತ್ತಿಗೆಗಳು ಹೊರಬಂದಿವೆ. ಇನ್ನೂ ಒಂದೆರಡು ತಯಾರಾಗುತ್ತಲೂ ಇವೆ. ಈಗ ಬಿಡುಗಡೆಯಾಗುತ್ತಿರುವ ಪುಸ್ತಕ ಸಮಾಕಾಲೀನರಲ್ಲಿ ಹಿರಿಯರಾದ ಕೆ. ಕೆ. ಹೆಬ್ಬಾರರನ್ನು ಕುರಿತದ್ದು.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರು ಕಲೆಯ ವಿಷಯ ಮತ್ತು ಆಯಾ ಕಲಾವಿದರ ಜೀವನದ ಬಗ್ಗೆ ಅರಿತವರು. ಇವುಗಳಿಗೆ ಆರಿಸಿರುವ ಚಿತ್ರಗಳೂ, ಆಯಾ ಕಲಾವಿದರ, ಅವರ ಕಲಾ ವಿಲಾಸದ ಪ್ರತೀಕ. ಅವು ಆಯಾ ಕಲಾವಿದರ, ಅವರ ಕಾಲದ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಾಧಕವಾಗುವುದರಲ್ಲಿ ಸಂದೇಹವಿಲ್ಲ.

ಈ ಮಾಲೆಯನ್ನು ತಯಾರಿಸುವುದರಲ್ಲಿ ಸಂಪಾದಕ ವಹಿಸಿರುವ ಶ್ರೀ ಎಸ್.ಎನ್. ಚಂದ್ರಶೇಖರ್ ಮತ್ತು ಅವರ ಪ್ರಕಟಣಾ ಸಮಿತಿಯ ಸದಸ್ಯರಾದ ಸರ್ವಶ್ರೀ ಎಂ.ಎಸ್. ನಂಜುಂಡರಾವ್, ಶ್ರೀ ಪಿ.ಆರ್. ತಿಪ್ಪೇಸ್ವಾಮಿ, ಶ್ರೀ ನಾಗಲಿಂಗಚಾರ್ಯ ಶಿಲ್ಪಿ, ಶ್ರೀ ಜಿ. ವೈ. ಹುಬ್ಬೀಕರ್ ಇವರಿಗೂ ಮತ್ತು ಗ್ರಂಥಕರ್ತರಿಗೂ ಅಕಾಡೆಮಿಯ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ಕಲಾವಿದರು, ಕಲಾ ರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

**ಸೋಮಶೇಖರ ಎಂ. ಸಾಲಿ**
*ಅಧ್ಯಕ್ಷರು*
ಕರ್ನಾಟಕ ಲಲಿತಕಲಾ ಅಕಾಡೆಮಿ

## ಎರಡನೇ ಆವೃತ್ತಿಯ ಮುನ್ನುಡಿ

ನಮ್ಮ ಲಲಿತಕಲಾ ಅಕಾಡೆಮಿಯ ಕಲಾವಿದರ ಮಾಲೆ ಜನಪ್ರಿಯವಾಗುತ್ತಿರುವುದು ಸಂತೋಷದಾಯಕ. ಅಕಾಡೆಮಿಯ ಇತರ ಪ್ರಕಟಣೆಗಳಂತೆ ಈ ಮಾಲೆಯ ಹೊತ್ತಿಗೆಗಳಿಗೂ ಸ್ವಲ್ಪ ನಿಧಾನವಾಗಿ ಯಾದರೂ, ಅವುಗಳ ಬೇಡಿಕೆ ಬೆಳೆದು, ಈಗ ಅವುಗಳ ಪುನರ್ ಮುದ್ರಣದತ್ತ ಸಾಗುತ್ತಿರುವುದು, ಅವುಗಳ ಅವಶ್ಯಕತೆ ಸಾರ್ಥಕತೆಗಳ ದ್ಯೋತಕ.

ಹಾಗೆ ಪುನರ್‌ಮುದ್ರಣಕ್ಕೆ ತೊಡಗುವಾಗ, ಹಿಂದೆ ಕಂಡಿರಬಹುದಾದ ಕೆಲವು ದೋಷಗಳನ್ನು ನಿವಾರಿಸುವ ಕೆಲಸವನ್ನೂ ಕೈಗೊಳ್ಳಲಾಗಿದೆ ಎಂಬ ಭರವಸೆಯನ್ನು ಈ ಮೂಲಕ ಓದುಗರಿಗೆ ಕೊಡುತ್ತೇವೆ.

ಈ ದಿಸೆಯಲ್ಲಿ ಈ ಪುನರ್‌ಮುದ್ರಣಗೊಳ್ಳುತ್ತಿರುವ ಕೆ.ಕೆ. ಹೆಬ್ಬಾರ್ ಕೃತಿಯನ್ನು ಕಲಾವಿದರ, ಸಾಹಿತ್ಯಪ್ರಿಯರ ಮತ್ತು ಇತರ ಓದುಗರ ಅವಗಾಹನೆಗೆ ತರುತ್ತಾ ಅಕಾಡೆಮಿಯ ಈ ಸಾಧನೆಗೆ ಪ್ರೋತ್ಸಾಹ ದೊರಕುವುದು ಆಶಿಸೋಣ.

ಪಿ.ಆರ್. ತಿಪ್ಪೇಸ್ವಾಮಿ
*ಅಧ್ಯಕ್ಷರು*
ಕರ್ನಾಟಕ ಲಲಿತಕಲಾ ಅಕಾಡೆಮಿ



# ಕೆ. ಕೆ. ಹೆಬ್ಬಾರ್

ಭಾರತದಲ್ಲಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಿಮಾತ್ಯ ಪದ್ಧತಿಯಂತೆ ಚಿತ್ರ ಹಾಗೂ ಶಿಲ್ಪಕಲೆಯ ಅಭ್ಯಾಸಕ್ಕಾಗಿ ಪ್ರಮುಖ ಪಟ್ಟಣಗಳಾದ ಕಲ್ಕತ್ತಾ, ಮುಂಬಯಿ, ಮದ್ರಾಸು ಮತ್ತು ಲಕ್ನೋಗಳಲ್ಲಿ ಕಲಾಶಾಲೆಗಳು ಸ್ಥಾಪಿತವಾದವು. ಅದೇ ವೇಳೆಯಲ್ಲಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಚಳವಳಿಯು ನಡೆಯುತ್ತಿತ್ತು. ಅಂಬನೀಂದ್ರನಾಥ ಠಾಕೂರರಂತಹ ಮೇಧಾವಿ ಕಲಾವಿದರು ನಮ್ಮ ಪ್ರಾಚೀನ ಕಲೆಯ ಸಿರಿವಂತಿಕೆಯನ್ನು ಅರಿತು, ನಮ್ಮ ಕಲೆಗೂ ಸ್ವಾತಂತ್ರ್ಯ ಸಿಗಬೇಕೆಂದು ಕಂಕಣಬದ್ಧರಾಗಿ ದುಡಿದರು. ಈ ಚಳಿವಳಿಯಲ್ಲಿ ಅವರ ಶಿಷ್ಯ ನಂದಲಾಲ್‌ಬೋಸ್ ಅವರು ಬೆಂಬಲವಾಗಿ ನಿಂತರು. ಈ ಶತಮಾನದ ಪೂರ್ವದಲ್ಲಿ ಬಂಗಾದಲ್ಲೇನೂ, ಅವರ ಪ್ರಯತ್ನವು ಸಫಲವಾಗತೊಡಗಿತು. ಆದರೆ ಉಳಿದ ಭಾಗದಲ್ಲಿ ಆಂಗ್ಲ ಕಲಾ ಶಿಕ್ಷಣ ಪದ್ಧತಿಯು ಭರದಿಂದ ಸಾಗುತ್ತಿತ್ತು. ಕೆಲವೊಂದು ಕಡೆ ಆ ಪದ್ಧತಿಯು ಈಗಲೂ ಸಂಪೂರ್ಣ ಅಳಿದುಹೋಗಲಿಲ್ಲ.

ಭಾರತ ಕಲಾ ಪ್ರಪಂಚದಲ್ಲಿ ವಿಚಾರವಂತರೂ, ಸೂಕ್ಷ್ಮ ಸಂವೇದನಾಶೀಲರೂ, ಶ್ರೇಷ್ಠ ಕಲಾವಿದರು ಎಂದು ಪ್ರಖ್ಯಾತಿಗೊಂಡವರಲ್ಲಿ ಕೆ.ಕೆ.ಹೆಬ್ಬಾರರು ಒಬ್ಬರು. ಹೆಬ್ಬಾರರ ಕಲಾಭ್ಯಾಸವು ಮುಂಬಯಿಯಲ್ಲಿ ಪಾಶ್ಚಿಮಾತ್ಯ ಪದ್ಧತಿಯಲ್ಲಿ ನಡೆಯಿತು. ಅವರು ಅಷ್ಟರಲ್ಲಿ ತೃಪ್ತರಾಗಲಿಲ್ಲ. ಅವರಲ್ಲಿ ತನ್ನ ದೇಶದ ಪ್ರಾಚೀನ ಕಲಾವೈಭವದ ಬೆಡಗೂ, ನಮ್ಮೀ ಶತಮಾನದ ಪ್ರಾರಂಭದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ, ಮುಖ್ಯವಾಗಿ ಪ್ಯಾರಿಸ್ಸಿನಲ್ಲಿ ಹುಟ್ಟಿ ಕಲಾಜಗತ್ತಿನಲ್ಲಿ ಕ್ರಾಂತಿ ಎಬ್ಬಿಸಿದ ಆಧುನಿಕ ಕಲೆಯಲ್ಲೂ ಅಭಿಮಾನ ಮೂಡಿತು ಮತ್ತು ಬೆಳೆಯಿತು. ಮುಖ್ಯವಾಗಿ 1938ರಲ್ಲಿ ಸಹ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಿಂದ ಡಿಪ್ಲೋಮ ಪಡೆದು ಹೊರಬಂದನಂತರ ಸ್ವತಂತ್ರ ಕಲೆಯ ಸಾಧನೆಗೆ ಪಣತೊಟ್ಟು ಪ್ರಯತ್ನಿಸಲಾರಂಭಿಸಿದರು. ಅವರ ಸತ್ಯಶೋಧನೆಯು ಇನ್ನೂ ನಡೆಯುತ್ತಲೇ ಇತ್ತು.

## ಜನನ ಮತ್ತು ಬಾಲ್ಯಜೀವನ

ದಕ್ಷಿಣ ಕನ್ನಡ ಜಿಲ್ಲೆಯ ಕಟ್ಟಂಗೇರಿ ಗ್ರಾಮದ ನಾರಾಯಣ ಹೆಬ್ಬಾರ್ ಮತ್ತು ಸೀತಮ್ಮ ಇವರಿಗೆ ಮೂರು ಜನ ಗಂಡು ಮಕ್ಕಳು. ಇವರ ಕೊನೆಯ ಮಗ ಕಂಟ್ಟಂಗೇರಿ ಕೃಷ್ಣ ಹೆಬ್ಬಾರ್. 15ನೇ ಜೂನ್ 1911ರಲ್ಲಿ (ಮುಂದೆ ದಾಖಲೆಯಲ್ಲಿ, ಜನನ 1912 ಎಂದು ಆಗಿಹೋದುದರಿಂದ ಆ ದಾಖಲನೆಯನ್ನೇ ಖಾಯಂ ಆಗಿ ಬಳಸಿಕೊಂಡು ಬರಬೇಕಾಯಿತು.) ಜನಿಸಿದರು. ಅವರಿಗೆ ಕಲೆ ರಕ್ತಗತವಾಗಿಯೇ ಬಂದಿದೆ. "ನಾನು ತುಂಬ ಚಿಕ್ಕವನಿದ್ದಾಗ ನಮ್ಮ ತಂದೆ ಗಣೇಶನ ಹಬ್ಬದಲ್ಲಿ ಗಣೇಶನನ್ನು ಮಾಡುತ್ತಿದ್ದರು. ಊರಿನಲ್ಲೆಲ್ಲಾ ನಮ್ಮ ಮನೆಯಲ್ಲಿ ಮಾತ್ರ ಗಣೇಶನ ಪೂಜೆ ಮಾಡುತ್ತಿದ್ದರು. ನಮ್ಮ ತಂದೆ ಮಾಡುತ್ತಿದ್ದ ಗಣೇಶ ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಅವರು ಗಣೇಶ ಮಾಡಿದರೆ, ನಾನು ಇಲಿ ಮಾಡುತ್ತಿದ್ದೆ. ನಮ್ಮ ತಂದೆ ನಿಧನರಾದನಂತರ ನಾನೇ ಗಣೇಶನನ್ನು ಮಾಡುತ್ತಿದ್ದೆ" ಎಂದು ತಾವು ಕಲಾವಿದರಾಗಲು ಮನೆಯ ವಾತಾವರಣ ಕಾರಣವೆನ್ನುತ್ತಾರೆ. ಅವರಿಗೆ ಗಣೇಶನ ಬಗ್ಗೆ ತುಂಬಾ ಅಭಿಮಾನ. ತಮ್ಮ ಮನೆಯ ಸ್ಟುಡಿಯೋದಲ್ಲಿ ಅವರು ಕುಳಿತುಕೊಳ್ಳುವ ಸ್ಥಳದ ಗೋಡೆಯ ಹಿಂಭಾಗದಲ್ಲಿ ತಾವೇ ರಚಿಸಿದ ಗಣೇಶನ ಚಿತ್ರವಿದೆ.

ಹೆಬ್ಬಾರರ ಗ್ರಾಮದ ಪರಿಸರ, ಅಲ್ಲಿನ ದೇಗುಲಗಳು ಮತ್ತು ಉಡುಪಿಯ ಶ್ರೀಕೃಷ್ಣನ ದೇಗುಲ, ಧರ್ಮ ಶ್ರದ್ಧೆಯ ಕೇಂದ್ರವಾದ ಇಲ್ಲಿ ಶ್ರದ್ಧಾಭಕ್ತಿಯಿಂದ ನಡೆಯುವ ಹಬ್ಬಗಳು ಹೆಬ್ಬಾರರಿಗೆ ವರ್ಣಮಯವಾಗಿ ಕಂಡವು. ಆ ಜಿಲ್ಲೆಯ ಯಕ್ಷಗಾನ ಬಯಲಾಟಗಳು ಇವರ ಮೇಲೆ ಗಾಢವಾಗಿ ಉಳಿದಿವೆ. ತಮ್ಮ ಹಳ್ಳಿಯ ಸುಂದರ ಬದುಕು, ಕೆಂಪುಭೂಮಿ, ಹಚ್ಚಹಸಿರಿನ ನಿಸರ್ಗ, ಬೂದುಬಣ್ಣದ ಕಲ್ಲು ಬಂಡೆಗಳು, ತಿಳಿನೀಲಿಯ ಸಮುದ್ರದ ಬಳಿ ನಿಂತಾಗ ಆಗುವ ವಿಶೇಷ ಅನುಭವಗಳೊಂದಿಗೆ ಕಲಾಜೀವನ ಪ್ರಾರಂಭಿಸಿದರು.

ಮಳೆಗಾಲದಲ್ಲಿ ಕಾಣುವ ಮೋಡಗಳು. ಕ್ಷಣಮಾತ್ರದಲ್ಲಿ ಅದೃಶ್ಯವಾಗುವ ಸುಂದರ ದೃಶ್ಯಗಳನ್ನು ಚಿತ್ರದಲ್ಲಿ ಅಭಿವ್ಯಕ್ತಿಗೊಳಿಸಲು ಅವರ ಹೃದಯ ತವಕಿಸುತ್ತಿತ್ತು. ಅವರು ಬಣ್ಣಗಳೊಡನೆ ಚಿತ್ರಿಸುತ್ತಿದ್ದ ವಾಸ್ತವಿಕ ದೃಶ್ಯಗಳನ್ನು ಕಂಡು ಅವರ ತಾಯಿ ಸೀತಮ್ಮನವರಿಗೆ ಆಗುತ್ತಿದ್ದ ಸಂತೋಷ ಹೇಳಲಾಗದು. ಆಕೆಯೇ ಮೊದಲು ಹೆಬ್ಬಾರರ ಚಿತ್ರಗಳ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿ, ತಮ್ಮ ಮಗನ ಆಸಕ್ತಿಗೆ ಮತ್ತು ಪ್ರತಿಭೆಗೆ ಪ್ರೋತ್ಸಾಹ ನೀಡಿದರು. "ನನ್ನ ಬಾಲ್ಯದ ದಿನಗಳಲ್ಲಿ ಆವೆ ಮಣ್ಣಿನಿಂದ ಅನೇಕ ಬಗೆಯ ಗೊಂಬೆಗಳನ್ನು



ಮಾಡುತ್ತಿದ್ದು. ನನ್ನ ಊರಿನ ನಿಸರ್ಗ ಚಿತ್ರಗಳನ್ನು ಪೆನ್ಸಿಲ್‌ನಿಂದ ಚಿತ್ರಿಸುತ್ತಿದ್ದೆ. ರವಿವರ್ಮನ ಜಟಾಯುವಧೆ ಚಿತ್ರವನ್ನು ಉಡುಪಿಯ ಕೃಷ್ಣ ಮಠದಲ್ಲಿ ಒಬ್ಬ ಕಲಾವಿದರು ಚಿತ್ರಿಸುತ್ತಿದ್ದರು. ಅವರು ಚಿತ್ರ ರಚಿಸುತ್ತಿದ್ದ ರೀತಿ, ಹಾಗೂ ರವಿವರ್ಮನ ಚಿತ್ರಗಳ ಮೇಲೆ ಆಸಕ್ತಿ ಹೊಂದಿ ನಾನು ಸಹ ರವಿವರ್ಮನ ಚಿತ್ರಗಳನ್ನು ನಕಲು ಮಾಡಲು ಪ್ರಾರಂಭಿಸಿದೆ. ಮೊದಲಿಗೆ ಸರಸ್ವತಿ ಚಿತ್ರವನ್ನು ಮನೆಯ ಗೋಡೆಯ ಮೇಲೆ ಚಿತ್ರಿಸಿದೆ. ಅದನ್ನು ನಾನು ದೀಪದ ಕರಿಬಣ್ಣದಿಂದ ಹಾಗೂ ವಿವಿಧ ವರ್ಣಗಳನ್ನು ಅಂಟಿನಲ್ಲಿ ಮಿಶ್ರಮಾಡಿ ಚಿತ್ರ ರಚಿಸಿದೆ. ನಾನು ಚಿತ್ರಿಸಿದ ಚಿತ್ರಗಳನ್ನು ನನ್ನ ಊರಿನ ಜನರೆಲ್ಲಾ ನೋಡಿ ಮೆಚ್ಚುಗೆ ಸೂಚಿಸಿ, ಹಳ್ಳಿಯ ಮುಗ್ಧಜನ ನನ್ನನ್ನು 'ದೈವದತ್ತ ದಲಾವಿದ' ಎಂದು ಕರೆದರು" ಎಂದು ತಮಗೆ ಹೇಗೆ ಕಲಾಸಕ್ತಿ ಬಂದಿತು ಹಾಗೂ ರವಿವರ್ಮನ ಚಿತ್ರಗಳು ತಮಗೆ ಹೇಗೆ ಸ್ಫೂರ್ತಿ ನೀಡಿತು ಎಂದು ತಿಳಿಸುವ ಹೆಬ್ಬಾರರು ಅಂದಿನಿಂದ ಇಂದಿನವರೆಗೆ ನಡೆದು ಬಂದ ದಾರಿಯಲ್ಲಿ ಎಷ್ಟೋ ಬದಲಾವಣೆ ಕಾಣಬಹುದು.

ಅವರು ಐದನೇ ತರಗತಿ ಮುಗಿಸಿದ ನಂತರ, ಮನೆಯ ಬಡತನದಿಂದ ಓದು ಮುಂದುವರಿಸಲು ಸಾಧ್ಯವಾಗಲಿಲ್ಲ. ಇಲ್ಲಿಂದ ನಾಲ್ಕು ವರ್ಷಗಳಲ್ಲಿ ಬಡಗೆಯ ಬಳಿ ಬಡಗಿ ಕಲಸ, ಮುಂತಾದವರ ಬಳಿ ಅವರವರ ಕೆಲಸವನ್ನು ಕಲಿಯಲು ಪ್ರಯತ್ನಿಸಿದೆ. ಆ ಸಮಯದಲ್ಲಿ ನಾನು ಏನೇನೂ ಕಲಿಯಲು ಸಾಧ್ಯವಿತ್ತೋ ಅದನ್ನೆಲ್ಲಾ ಕಲಿತ. ಆಗ ನಾನು ಕಲಿತ ವಿವಿಧ ಕೆಲಸಗಳು. ನನ್ನ ಜೀವನದಲ್ಲಿ ಮುಂದೆ ತುಂಬಾ ಉಪಯುಕ್ತವಾಯಿತು. ಆಗ ನನ್ನ ವಿದ್ಯಾಭ್ಯಾಸ ನಿಂತುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಓದು ಮುಂದವರಿಸಿದ್ದರೆ ಬಹುಶಃ ಇಂದು ನಾನು ಕಲಾವಿದನಾಗುತ್ತಿರಲ್ಲಿಲ್ಲವೇನೋ" ಎನ್ನುವ ಹೆಬ್ಬಾರರು ಬಡತನದ ಕಹಿಯನ್ನು ಜೀವನದಲ್ಲಿ ಕಂಡು ಸುಖಜೀವನ ನಡೆಸುತ್ತಿರುವೆ ಎಂದು ತಮ್ಮ ಹಿಂದಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು.

"ನನ್ನ ಬಾಲ್ಯದ ಬಡತನದ ಕಷ್ಟಗಳು ಈಗಿರುವಾಗ ಆಗಬಾರದೆಂದು ನನ್ನ ಇಚ್ಛೆ. ನನ್ನ ಜೀವನದಲ್ಲಿ ಏನೇ ಕೆಲಸ ಮಾಡಲಿ ನನ್ನ ಹಿಂದಿನ ಬಾಳಿನ ದಿನಗಳನ್ನು ನೆನಸಿಕೊಂಡು ಮತ್ತೊಬ್ಬರಿಗೆ ಕಷ್ಟ ಬರಬಾರದೆಂದು ತಿಳಿದಿರುವೆ" ಯಾರೇ ಅವರ ಬಳಿ ಹೋಗಿ ಕಷ್ಟವನ್ನು ಹೇಳಿಕೊಂಡಾಗ, ಸಹಾಯ ಮಾಡುವ ಮೃದು ಮನಸ್ಸಿನ ವ್ಯಕ್ತಿ ಅವರಾಗಿದ್ದರು.

ಹೆಬ್ಬಾರರು ತಮ್ಮ ಹದಿನೈದನೆ ವಯಸ್ಸಿನಲ್ಲಿ ತಾವು ಕಲಿತ ಬಾಸೆಲ್‌ಮಿಷನ್ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸಕ್ಕೆ

ಸೇರಿದರು. ಶಾಲೆಯಲ್ಲಿ ಪಾಠ ಪ್ರವಚನ ಮಾಡುವಾಗ ಮಕ್ಕಳಿಗೆ ಚಿತ್ರ ಬಿಡಿಸಿ, ಹೇಳುತ್ತಿದ್ದರು. ಒಮ್ಮೆ ಅವರು ರಚಿಸಿದ ಶಾಕುಂತಲಾ ಕಥೆಯ ಚಿತ್ರಗಳನ್ನು ಬಾಸೆಲ್‌ಮಿಷನ್ ಸಂಸ್ಥೆಯ ಮೇಲಾಧಿಕಾರಿ ನೋಡಿ ಹೆಬ್ಬಾರರನ್ನು ಪ್ರೌಢ ಶಾಲೆಯ ಅಭ್ಯಾಸವನ್ನು ಮುಗಿಸಿ ಮುಂದೆ ಕಲಾವಿದನಾಗಬೇಕೆಂದು ಕಡ್ಡಾಯವಾಗಿ ಹೇಳಿದುದರಿಂದ ಅಧ್ಯಾಪಕ ವೃತ್ತಿಯನ್ನೇ ಬಿಟ್ಟು ಶಿಕ್ಷಣವನ್ನು ಮುಂದುವರಿಸಿದರು. ತಮ್ಮ ಹೈಸ್ಕೂಲ್ ವಿಧ್ಯಾಭ್ಯಾಸ ಉಡುಪಿಯಲ್ಲಿ, ಮುಂಬಯಿನಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಸಹೋದರನ ಸಹಾಯದಿಂದ ಮುಗಿಸಿದರು.

ಅವರ ಹೈಸ್ಕೂಲ್ ವಿಧ್ಯಾಭ್ಯಾಸ ಮುಗಿದ ನಂತರ, ಹಿತಚಿಂತಕರೊಬ್ಬರು ಹೆಬ್ಬಾರರಲ್ಲಿದ್ದ ಕಲಾಪ್ರೌಢಿಮೆಯನ್ನು ಗುರ್ತಿಸಿ, ಅವರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರುವಂತೆ ಪ್ರೋತ್ಸಾಹಿಸಿದರು. ಕಲೆಯನ್ನು ಕಲಿಯಲು ಉತ್ಸಾಹದಿಂದ ಬಂದ ಹೆಬ್ಬಾರರಿಗೆ ಅಲ್ಲಿನ ಕಲಾಶಿಕ್ಷಣ ಬೇಸರ ತಂದಿತು. ವಿದ್ಯಾರ್ಥಿಯ ಚಿಂತನೆಗಳಿಗಾಗಲೀ ಹೊಸ ವಿಚಾರಗಳಿಗಾಗಲೀ ಅಲ್ಲಿ ಅವಕಾಶವಿರಲಿಲ್ಲ. ಇಲ್ಲಿಯೇ ಶಿಕ್ಷಣ ಮುಂದುವರಿಸಿದರೆ ತಾವು ಕಲಾವಿದರಾಗುವುದಿಲ್ಲ ಎಂಗು ಮನವರಿಕೆಯಾಯಿತು. ಆರು ತಿಂಗಳೊಳಗೆ ಉಡುಪಿಗೆ ಹಿಂದಿರುಗಿ ಅಲ್ಲಿಯ ಛಾಯಚಿತ್ರಗ್ರಾಹಕ ಪಡುಕೋಣೆ ಶ್ರೀನಿವಾಸರಾಯರ ಬಳಿ ಫೋಟೋ ತಿದ್ದುವ ಕೆಲಸವನ್ನು ಕಲಿತುಕೊಂಡು, ಅವರ ಪ್ರೇರಣೆಯಂತೆ ಕಲಾಭ್ಯಾಸವನ್ನೇ ಧೋರಣೆಯಾಗಿಟ್ಟುಕೊಂಡು, 1933ರಲ್ಲಿ ಮುಂಬಯಿಗೆ ಪ್ರಯಾಣ ಬೆಳೆಸಿದರು.

## ಮುಂಬಯಿಯಲ್ಲಿ

ಮುಂಬಯಿಯಲ್ಲಿ ತಮ್ಮ ಜೀವನಕ್ಕಾಗಿ ಒಬ್ಬ ಫೋಟೋಗ್ರಾಫರ ಬಳಿ ಫೋಟೋ ತಿದ್ದುವ ಕೆಲಸಕ್ಕೆ ಸೇರಿದರು. ಒಂದು ದಿನ ಆಕಸ್ಮಿಕವಾಗಿ ಕಲಾವಿದರೊಬ್ಬರ ಮನೆಯಲ್ಲಿ ಕನ್ನಡದವರೇ ಆದ ಕಲಾವಿದ ವಿ.ಆರ್. ರಾವ್ ಅವರ ಪರಿಚಯವಾಯಿತು. ಅವರು ಜಿ.ಎಸ್. ದಂಡಾವತಿ ಮಠರು ಆಗತಾನೇ ಸ್ಥಾಪಿಸಿದ್ದ ನೂತನ ಕಲಾಮಂದಿರಕ್ಕೆ ಮುಂಜಾನೆಯ ವೇಳೆಯಲ್ಲಿ ಕಲೆಯ ಅಭ್ಯಾಸ ಮಾಡಲು ಹೋಗುವುದು ಯೋಗ್ಯವೆಂದು ಉಪದೇಶಿಸಿದರು. ಹೆಬ್ಬಾರರಿಗೆ ಬರುತ್ತಿದ್ದ ಅಲ್ಪ ಸಂಬಳ, ಬಡತನದಲ್ಲಿ ಕಲಾಶಾಲೆ ಸೇರಿ ಹೇಗೆ ಕಲಿಯುವುದು ಎಂಬ ಶಂಕೆ. ಆದರೂ ಧೈರ್ಯಮಾಡಿ ನೂತನ ಕಲಾಮಂದಿರಕ್ಕೆ ಸೇರಿದರು. "ನಾನು ಕಲಾಶಾಲೆಗೆ ಹೋದುದು ದಂಡಾವತಿ



ಮಾಸ್ತರರಿಗೆ ಸಂತೋಷವಾಯಿತು. ಪರೀಕ್ಷೆಗೆ ಕುಳಿತುಕೊಳ್ಳುವಂತೆ ಪ್ರೋತ್ಸಾಹಿಸಿದರು. ನನಗೆ ಮೊದಲೇ ಕಲೆಯ ಪರಿಚಯವಿದ್ದುದರಿಂದ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಬಹುಮಾನದೊಂದಿಗೆ ಪಾಸಾದೆ. ದಂಡಾವತಿ ಮಠರು ನನ್ನನ್ನು ತುಂಬಾ ಮೆಚ್ಚಿ ಕಲಾಶಿಕ್ಷಣ ಮುಂದುವರೆಸುವಂತೆ ಪ್ರೇರೇಪಿಸಿದರು. ಅವರು "ಏನೇ ಆಗಲಿ, ಅಡ್ವಾನ್ಸ್ ಪರೀಕ್ಷೆ ಮಾಡು, ಅನಂತರ ಡಿಪ್ಲೋಮೊ ಯಾವಾಗ ಬೇಕಾದರೂ ಮಾಡಬಹುದು" ಎಂದು ಒತ್ತಾಯಿಸಿದರು. ಅವರಲ್ಲಿದ್ದ ಪ್ರತಿಭೆಯನ್ನು ಗುರ್ತಿಸಿ, ಕಲಾವಿದನಾಗುವ ಲಕ್ಷಣಗಳನ್ನು ಕಂಡ ದಂಡಾವತಿಯವರು ಪ್ರೋತ್ಸಾಹದಿಂದ ಹೆಬ್ಬಾರರ ಆಸೆ ಚಿಗುರಿತು. ದೃತಿಗೆಡದೆ ಕಲಾಶಿಕ್ಷಣ ಮುಂದುವರಿಸಿದರು.

"ದಂಡಾವತಿ ಮಾಸ್ತರರು ನನಗೆ ಕಲಾಶಿಕ್ಷಣ ಕಲಿಯುವಂತೆ ಪ್ರೋತ್ಸಾಹ ನೀಡದಿದ್ದರೆ ನಾನು ಮುಂದೆ ಬರಲು ಸಾಧ್ಯವಾಗುತ್ತಿಲಿಲ್ಲ. ನನ್ನನ್ನು ತಮ್ಮ ಮಗನಂತೆ ನೋಡಿಕೊಂಡರು. ನನ್ನ ಈವೊತ್ತಿನ ಶ್ರೇಯಸ್ಸಿಗೆ ಅವರು ಕಾರಣರಾಗಿದ್ದಾರೆ" ಎಂದು ಅವರನ್ನು ನೆನೆಯುತ್ತಾರೆ. ದಂಡಾವತಿಯವರ ಮಾರ್ಗದರ್ಶನದಲ್ಲಿ ವಸ್ತುಚಿತ್ರಣ. ಪ್ರಕೃತಿ ಚಿತ್ರಣ, ಗ್ರೀಕ್ ರೋಮನ್ ಚಿತ್ರಗಳನ್ನು ಚಿತ್ರಿಸುವುದು ಹಾಗೂ ಹೊರಗಡೆ ಹೋಗಿ ಸ್ಕೆಟ್‌ಗಳನ್ನು ಮಾಡಿಕೊಂಡು ಬಂದು, ಚಿತ್ರ ರಚನೆಗೆ ಸಂಯೋಜನೆ ಮಾಡುವುದು. ಆಗ ಪೌರಾಣಿಕ ವಸ್ತುಗಳನ್ನು ಬಹಳ ಇಷ್ಟಪಡುತ್ತಿದ್ದ ಹೆಬ್ಬಾರರು ಚಿತ್ರದ ಸಂಯೋಜನೆಗೆ ಅನುಕೂಲವಾಗುವಂತೆ ರೂಪದರ್ಶಿಗಳ ಸಹಾಯ ಪಡೆಯುತ್ತಿದ್ದರು.

ಅನಂತರ ಮುಂಬಯಿಯ ಸರ್. ಜೆ.ಜೆ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಅಂತಿಮ ಡಿಪ್ಲೋಮೊ ತರಗತಿಗೆ ಸೇರಿದರು. ಅಲ್ಲಿನ ಪ್ರಿನ್ಸಿಪಾಲ ಚಾರ್ಲಸ್ ಜೆರಾರ್ಡ್ ಅವರು ಕಲಾವಿದ್ಯಾರ್ಥಿಗಳ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳುವ ಸ್ವಭಾವದವರು. ಕಲಾಶಿಕ್ಷಣದಲ್ಲಿ ಹಳೆಂಯ ಪದ್ಧತಿ ಹೆಚ್ಚು ಪ್ರಾಧಾನ್ಯವಾಗಿರುವುದನ್ನು ಒಪ್ಪುತ್ತಿರಲಿಲ್ಲ ಹಾಗೂ ತಮ್ಮ ಕಲಾಶಾಲೆಯಲ್ಲಿ ಅದನ್ನು ಬೋಧಿಸುವುದನ್ನು ಇಷ್ಟಪಡದೆ, ವಿದ್ಯಾರ್ಥಿಗಳು ಸೃಜನಶೀಲತೆ ಮತ್ತು ಸ್ವಂತಿಕೆಯನ್ನು ರೂಢಿಸಿಕೊಂಡು ಆಧುನಿಕ ಕಲೆಯ ತಂತ್ರ ಮತ್ತು ಕಲಾಪಂಥದ ಅರಿವನ್ನು ತಿಳಿದುಕೊಳ್ಳುವಂತೆ ಬೋಧಿಸುತ್ತಿದ್ದರು. ಜೆರಾರ್ಡ್ "ಹೆಬ್ಬಾರರು, ಅಚ್ಚುಮೆಚ್ಚಿನ ಮತ್ತು ಭರವಸೆ ಕೊಡುವ ಕಲಾವಿದರೆಂದು" ತಿಳಿದಿದ್ದರು. ಹೊಸ ವಿಚಾರಗಳನ್ನು, ಚಿತ್ರ ರಚಿಸುವ ಮತ್ತು ಇತರ ಚಿತ್ರಗಳಿಗೆ ಹೋಲಿಸುವ ಗುಣವನ್ನು ತಿಳಿದಿದ್ದ ಅವರಲ್ಲಿ, ಕುಶಲತೆ ಸ್ವಾಭಾವಿಕವಾಗಿ ಬಂದ ಕೊಡುಗೆಯಾಗಿತ್ತು.

ಚಾರ್ಲಸ್ ಜಿರಾರ್ಡ್ ಅವರು ಹೆಬ್ಬಾರರ ಚಿತ್ರಗಳನ್ನು ನೋಡಿ "ಹೆಬ್ಬಾರ್, ಈಗ ಈ ಕಲೆಯ ತಂತ್ರ ಮತ್ತು ಕುಶಲತೆ ನಿನ್ನ ಬೆರಳುಗಳಲ್ಲಿ ಇದೆ. ಆದರೆ ಅದರಲ್ಲಿ ನಿನ್ನತನ ಕಾಣುವುದಿಲ್ಲ. ನಿನ್ನತನ ಕಂಡುಕೊಂಡು ನಿನ್ನ ದಾರಿಯಲ್ಲಿ ಸಾಗಬೇಕು" ಎಂದು ಉತ್ತೇಜಿಸಿದರು. ಇದು ಅವರ ಜೀವನ ಮಾರ್ಗವನ್ನೇ ಬದಲಾಯಿಸಿತು. ಸ್ವತಂತ್ರ ಮಾರ್ಗಕ್ಕಾಗಿ ಶ್ರಮಿಸಿದರು. ಅದರಲ್ಲಿ ಯಶಸ್ವಿಯಾದರು. ಜಿರಾರ್ಡ್ ಅವರ ಮಾತುಗಳನ್ನು ಪ್ರತಿದಿನವೂ ನೆನಸಿಕೊಳ್ಳುವ ಹೆಬ್ಬಾರರು. "ನನ್ನ ಜೀವನದಲ್ಲಿ ಇಬ್ಬರನ್ನೂ ಎಂದಿಗೂ ಮರೆಯಲಾರೆ. ಒಬ್ಬರು ನನ್ನಲ್ಲಿದ್ದ ಪ್ರತಿಭೆ ಗುರುತಿಸಿದ ದಂಡಾವತಿ ಮಾಸ್ತರರು ಮತ್ತು ನನ್ನಲ್ಲಿ ಸ್ವಂತ ಮಾರ್ಗ ಕಂಡುಕೊಳ್ಳುವಂತೆ ಪ್ರೇರೇಪಿಸಿದ ಚಾರ್ಲಸ್ ಜಿರಾರ್ಡ್" ಎನ್ನುತ್ತಾರೆ ಅವರು.

## ಸ್ವತಂತ್ರ ದಾರಿಯಲ್ಲಿ

ಕಲಾಶಿಕ್ಷಣ ಮುಗಿದ ನಂತರ ಹೆಬ್ಬಾರ್ ಅವರು ಕಾರ್ಲಗುಹೆಗೆ ಭೇಟಿಯಿತ್ತು. ಅದರ ಚಿತ್ರ ರಚಿಸಿದರು. ಇದರಲ್ಲಿ ಕಲೆಯ ಮೂಲಭೂತ ತತ್ತ್ವ, ದೃಷ್ಟಿಶಾಸ್ತ್ರ, ಮತ್ತು ಒಳ್ಳೆಯ ಕುಶಲತೆಯಿದ್ದು ವಾಸ್ತವಿಕ ಚಿತ್ರಣವನ್ನು ಕಾಣಬಹುದು. ಇದು ವಾಸ್ತವಿಕ ಚಿತ್ರದಲ್ಲಿ ಒಂದು. ಒಳ್ಳೆಯ ಕೃತಿಯಾಗಿದ್ದು, ಇದಕ್ಕೆ 1941ರಲ್ಲಿ 'ಅಕಾಡೆಮಿ ಆಫ್ ಫೈನ್ ಆರ್ಟ್ಸ್', ಕಲ್ಕತ್ತಾದ ಸುವರ್ಣ ಪದಕವನ್ನು ಪಡೆದಿದ್ದರು. ಇದರಿಂದ ಉತ್ತೇಜಿತರಾದ ಹೆಬ್ಬಾರರಿಗೆ ಮುಂದೆ ಚಿತ್ರ ರಚಿಸುವಂತೆ ನಂಬಿಕೆ ಬಂದಿತು.

ಸರ್. ಜೆ. ಜೆ. ಕಲಾಶಾಲೆಯಲ್ಲಿ 1939ರಲ್ಲಿ ಅಧ್ಯಾಪಕರಾಗಿ ಸೇರಿದ ಹೆಬ್ಬಾರರು ಅಂದಿನಿಂದ ಕಲೆಯ ಬಗ್ಗೆ ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡರು. ಡಾ. ಆನಂದಕುಮಾರ ಸ್ವಾಮಿಯವರು "ಭಾರತೀಯ ಕಲೆಯ ತತ್ವಗಳು" ಪುಸ್ತಕ ಅವರಿಗೆ ತುಂಬಾ ಇಷ್ಟವಾಗಿ, ಅದರಿಂದ ಅನೇಕ ವಿಷಯಗಳನ್ನು ತಿಳಿದುಕೊಂಡರು. ಬಾಗ್, ಅಜಂತಾ ಮತ್ತು ಭಾರತದ ಚಿಕಣಿ ಚಿತ್ರಗಳಲ್ಲಿರುವ ರೇಖಾ ಲಾಲಿತ್ಯ, ಜೈನರ ಚಿಕಣಿ ಚಿತ್ರಗಳಲ್ಲಿರುವ ಅಲಂಕರಣದ ಆಕಾರಗಳು ಮತ್ತು ಉಜ್ವಲ ವರ್ಣ ಇವರನ್ನು ಹೆಚ್ಚು ಆಕರ್ಷಿಸಿತು.

1942ರಲ್ಲಿ ತಾವು ಬಾಲ್ಯದಲ್ಲಿ ಕಂಡಿದ್ದ ಹಳ್ಳಿ ಜಾತ್ರೆಯಲ್ಲಿ ದನಗಳನ್ನು ತಂದು ಮಾರುತ್ತಿರುವ ದೃಶ್ಯವನ್ನು ಅವರು ಜ್ಞಾಪಿಸಿಕೊಂಡು "ಜಾನುವಾರು ಸಂತೆ" ಎಂಬ ಕೃತಿಯನ್ನು ಭಾರತೀಯ ಚಿಕಣಿ ಚಿತ್ರದ ಶೈಲಿಯಲ್ಲಿ ರಚಿಸಿದರು.



ನೈಸರ್ಗಿಕ ಒಲವು ಮತ್ತು ಗ್ರಾಮ ಜೀವನದ ಕಲ್ಪನೆಯಿಂದ ಕೆಂಪು, ಹಸಿರು, ಕಪ್ಪು ಮತ್ತು ಬಿಳಿಯಂತ ಕೆಲವೇ ಬಣ್ಣಗಳನ್ನು ಉಪಯೋಗಿಸಿರುವ ಈ ಚಿತ್ರ ಅಲಂಕರಣ ಮತ್ತು ಲಾಲಿತ್ಯ ಕಲ್ಪನೆಗೆ ಕೊಡುಗೆಯಾಗಿದೆ. ಈ ಚಿತ್ರ ಈಗ ಸರ್. ಜೆ. ಜೆ. ಕಲಾಶಾಲೆಯಲ್ಲಿದೆ. 1939–42ರಲ್ಲಿ ಅಮೃತಾ ಶೇರ್‌ಗಿಲ್ ಭಾರತೀಯ ಕಲೆಯಲ್ಲಿ ಅತ್ಯಂತ ಪ್ರಭಾವಿತ ಕಲಾವಿದೆಯಾಗಿದ್ದರು. ಪಾಶ್ಚಾತ್ಯ ತಂತ್ರಗಳನ್ನು ಬಳಸಿ ಭಾರತೀಯತೆಯೊಡನೆ ಚಿತ್ರ ರಚಿಸುತ್ತಿದ್ದ ರೀತಿಯನ್ನು ಹೆಬ್ಬಾರರು ಇಷ್ಟಪಟ್ಟಿದ್ದರು. ಅವರು ಭಾರತೀಯ ಶೈಲಿಯಲ್ಲಿ ಚಿತ್ರ ರಚಿಸುತ್ತಿದ್ದರೂ ಶೇರ್‌ಗಿಲ್‌ಳ ಚಿತ್ರಗಳನ್ನು ಮೆಚ್ಚಿದ್ದರು. ಅದರಿಂದಾಗಿ 1946–48ರ ಅವರ ಕೆಲವೊಂದು ಚಿತ್ರಗಳಲ್ಲಿ ಶೇರ್‌ಗಿಲ್‌ಳ ಪ್ರಭಾವ ಕಾಣಬಹುದು.

ಹೆಬ್ಬಾರರು ಒಂದು ಸ್ಥಳದಲ್ಲಿ ಹೆಚ್ಚು ದಿನ ಇರುವವರಲ್ಲ. ಪ್ರವಾಸ ಮಾಡುವುದೆಂದರೇ ಮೊದಲಿನಿಂದಲೂ ಅವರಿಗೆ ಇಷ್ಟ. ಭಾರತದ ಎಲ್ಲಾ ರಾಜ್ಯಗಳಲ್ಲಿ ಅವರು ಪ್ರವಾಸ ಮಾಡಿದ್ದಾರೆ. ಹಾಗೂ ವಿಶ್ವದ ಅನೇಕ ಭಾಗಗಳಿಗೆ ಭೇಟಿಯಿತ್ತು. ಅಲ್ಲಿನ ಅನುಭವಗಳನ್ನು ತಮ್ಮ ಚಿತ್ರ ರಚನೆಗೆ ಉಪಯೋಗಿಸಿರುವರು. ಕುಲು ಕಣಿವೆಯಲ್ಲಿ ಕಂಡ ನೃತ್ಯವನ್ನು ಒಂದು ಜಲವರ್ಣದಲ್ಲಿ ಚಿಕಣಿ ಚಿತ್ರದ ತಂತ್ರಕ್ಕನುಸಾರವಾಗಿ ರಚಿಸಿದ "ಉತ್ಸವ ನೃತ್ಯ" ಈ ಚಿತ್ರದಲ್ಲಿನ ಸಂತೋಷ ಮತ್ತು ಲಯಬದ್ಧವಾದ ಹೆಜ್ಜೆಗಳು, ಅಲ್ಲಿನ ಪರಿಸರವನ್ನು ಹೊಂದಿರುವ ಈ ಚಿತ್ರ ಲಂಡನ್ನಿನ ಕಲಾಪ್ರದರ್ಶನದಲ್ಲಿ ಪ್ರದರ್ಶಿತವಾದಾಗ ಅಪಾರ ಮೆಚ್ಚುಗೆ ಪಡೆಯಿತು.

1946ರಲ್ಲಿ ಅವರು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿ, ಕೇರಳದ ಹಸಿರು ಬಯಲುಗಳಲ್ಲೂ, ಬಿಳಿಯ ಬಟ್ಟೆಗಳನ್ನು ಧರಿಸಿರುವ ಕಂದು ಬಣ್ಣದ ವ್ಯಕ್ತಿಗಳು, ಕೇರಳದ ವರ್ಣಮಯ ಕಥಕ್ಕಳಿ ನೃತ್ಯ ಅವರ ಬಾಲ್ಯದಲ್ಲಿ ನೋಡಿದ್ದ ಯಕ್ಷಗಾನದ ನೆನಪು ತಂದು, ಪೂಣಂ ಹಬ್ಬ ಹಾಗೂ ಆನೆಗಳಿಗೆ ಅಲಂಕಾರ ಮಾಡಿರುವ ಉಡುಗೆತೊಡುಗೆಗಳು ಮತ್ತು ಅಲ್ಲಿನ ದೀಪೋತ್ಸವ ಮುಂತಾದವು ಅವರಿಗೆ ಚಿತ್ರ ರಚಿಸಲು ಪ್ರೇರೇಪಿಸಿದವು.

ದಕ್ಷಿಣ ಭಾರತ ಪ್ರವಾಸದಿಂದ ಸ್ಫೂರ್ತಿಗೊಂಡ ಹೆಬ್ಬಾರರು ಅನುಕ್ರಮವಾಗಿ ಅನೇಕ ಚಿತ್ರಗಳನ್ನು ರಚಿಸಿದರು. ಈ ಸಮಯದಲ್ಲಿ ದೊಡ್ಡ ದೊಡ್ಡ ಕ್ಯಾನ್ ಪಾಸ್‌ಗಳಲ್ಲಿ ತೈಲವರ್ಣಗಳನ್ನು ಉಪಯೋಗಿಸಿ. 'ಸನ್ನಿಸೌತ್', 'ಪುರಂ', 'ಟೂ ಮೈಡನ್ ಹುಡ್' ಮೊದಲಾದ ಚಿತ್ರಗಳನ್ನು ರಚಿಸಿದರು. 1947ರಲ್ಲಿ ಟೂ ಮೈಡನ್ ಹುಡ್ ಚಿತ್ರ ಮುಂಬಯಿ ಆರ್ಟ್ ಸೊಸೈಟಿಯ ಸ್ವರ್ಣ ಪದಕವನ್ನು ಪಡೆಯಿತು. ಇದರಿಂದ ಕಲಾವಿಮರ್ಶಕರು

ಅಮೃತಾಶೇರ್‌ಗಿಲ್‌ಳ ಉತ್ತರಾಧಿಕಾರಿಯೆಂದು ಬರೆದರು. ಆದರೆ ಆಕೆಯ ಪ್ರಭಾವಕ್ಕಿಂತ ಇವರ ಚಿತ್ರಗಳ ಮೇಲೆ ಪಾಶ್ಚಾತ್ಯ ಕಲಾವಿದ ಪಾಲ್‌ಗಾಗಿನ್‌ನ ಪ್ರಭಾವವಿದೆ ಎಂದು ಒಪ್ಪುತ್ತಾರೆ. ಇದುವರೆಗೆ ಹೆಬ್ಬಾರರ ಸಾಧನೆ ಬಗ್ಗೆ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಭಾರತ ಸರ್ಕಾರವು ಹೆಬ್ಬಾರರು ಕಲೆಯಲ್ಲಿ ಸಲ್ಲಿಸಿದ ಸೇವೆಗಾಗಿ 2,500/–ರೂ.ಗಳ ಪ್ರಶಸ್ತಿ ನೀಡಿತು. ಈ ಹಣದೊಂದಿಗೆ ಮತ್ತು ಏಕವ್ಯಕ್ತಿ ಕಲಾಪ್ರದರ್ಶನದಿಂದ ಗಳಿಸಿದ ಹಣದಿಂದ ಯುರೋಪ್ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಆಧುನಿಕ ಕಲಾ ಚಳವಳಿಯನ್ನು ನೋಡಲು ಮತ್ತು ವಿಶಾಲದೃಷ್ಟಿ ಬೆಳೆಸಿಕೊಳ್ಳಲು ಸಾಧ್ಯವಾಯಿತು.

## ಯುರೋಪ್ ಪ್ರವಾಸ

ಯುರೋಪಿನಲ್ಲಿ ಅವರು ಇಟಲಿಯ ಪ್ರಾಚೀನ ಮತ್ತು ಪ್ಯಾರಿಸ್ಸಿನ ಸಮಕಾಲೀನ ಚಳುವಳಿಯಲ್ಲಿ ವಿವಿಧ ಪಂಥಗಳನ್ನು ಅಧ್ಯಯನ ಮಾಡುತ್ತಾ ಎಲ್ಲಾ ವಸ್ತು  ಸಂಗ್ರಹಾಲಯಗಳು ಮತ್ತು ಕಲಾಭವನಗಳಿಗೆ ಭೇಟಿ ನೀಡಿ, ಕೆಲವು ಕಾಲದ ಮಟ್ಟಿಗೆ ಪ್ರಾಯೋಗಿಕ ಅನುಭವ ಪಡೆಯುವ ಸಲುವಾಗಿ ಪ್ಯಾರಿಸ್ಸಿನ ಜ್ಯೂಲಿಯಸ್ ಅಕಾಡೆಮಿಗೆ ವಿದ್ಯಾರ್ಥಿಯಾಗಿ ಸೇರಿಕೊಂಡರು. ಪ್ರೊಫೆಸರ್ ಕವಯ್ಯೆ ಅವರು ಬೋನಾರ್ಡ್ ಸ್ಕೂಲ್ ಆಫ್ ಇಂಪ್ರೆಷನಿಸಮ್ ಅನುಯಾಯಿಗಳು. ಇವರಲ್ಲಿ ಮಾರ್ಗದರ್ಶನ ಪಡೆದರು. ಹೆಬ್ಬಾರರು ಇಂಪ್ರೆಷನಿಸಮ್ ತಂತ್ರ ಅನುಸರಿಸಿ ಚಿತ್ರ ರಚಿಸಿದರು. ಅಕಾಡೆಮಿಯಲ್ಲಿ ನಡೆದ ವಾರ್ಷಿಕ ಕಲಾಸ್ಪರ್ಧೆಯಲ್ಲಿ ಅವರು ತಮ್ಮ ಮುಂಚಿನ ಭಾರತೀಯ ಶೈಲಿಯಲ್ಲಿಯೇ ಚಿತ್ರ ರಚಿಸಿ ಬಹುಮಾನ ಗಳಿಸಿದರು. ಅವರು ಮುಂಚಿನ ಜಾನುವಾರು ಜಾತ್ರೆ ಚಿತ್ರವನ್ನು ಸುಪ್ರಸಿದ್ಧ ಕಲಾವಿದ ಜಾರ್ಜ್‌ರೂವೋ ಅವರಿಗೆ ತೋರಿಸಿದಾಗ ಅವರು ಈಗ ಪ್ಯಾರಿಸ್ಸಿನಲ್ಲಿ ರೂಢಿಯಲ್ಲಿರುವ ಆಧುನಿಕ ಪ್ರವೃತ್ತಿಗಳಿಗೆ ದಾಸನಾಗುವ ಬದಲು ಸ್ವಂತ ಕೃತಿ ರಚನೆಗೇ ಬದ್ದನಾಗಿರು ಎಂಬ ಅವರ ಹಿತವಚನಗಳೇ ಇದಕ್ಕೆ ಕಾರಣವಾಗಿದ್ದು, ವಾರ್ಷಿಕ ಸ್ಪರ್ಧೆಯಲ್ಲಿ ಅವರ ಚಿತ್ರಕ್ಕೆ ಬಹುಮಾನ ದೊರಕಿತು. "ನಾನು ಭಾರತೀಯ ಕಲೆಯೇ ಆಗಿರಲಿ ಅಥವಾ ಯೂರೋಪಿನ ಕಲೆಯೇ ಆಗಿರಲಿ ತುಳಿದ ದಾರಿಯನ್ನೇ ಅನುಸರಿಸಲು ಸಿದ್ಧನಿರಲಿಲ್ಲ. ರೂಪ ವಿಕಾಸಗೊಳಿಸುವ ಕಲಾವಿದ ಪಿಕಾಸೋವಿನ ಅದ್ವಿತೀಯ ವಿಧಾನ, ಮತೀಸ್‌ನ ಅಲಂಕಾರಿಕ ರೇಖೆಯ ಸ್ಥಿರತೆ, ಬ್ರಾಕ್‌ನ ಶ್ರೀಮಂತ ವರ್ಣಸಂಯೋಜನೆ ಹಾಗೂ ರುವೋನ ಚಿತ್ರಗಳಲ್ಲಿ ಎದ್ದು ಕಾಣುವ ಗುಣವನ್ನು ಮೆಚ್ಚಿದೆ". ಇದರಿಂದಲೇ ಅವರ ಚಿತ್ರಗಳಲ್ಲಿ



ವಿಶಿಷ್ಟವಾದ ವರ್ಣಸಂಯೋಜನೆ ಕಾಣುವುದಲ್ಲದೇ, ಕೃತಿಯನ್ನು ನೋಡಿದ ತಕ್ಷಣ, ಇದು ಹೆಬ್ಬಾರರ ಕಲಾಕೃತಿ ಎಂದು ಗುರುತಿಸಬಹುದಾಗಿರುತ್ತದೆ.

ಪ್ಯಾರಿಸ್ಸಿನಲ್ಲಿ ಐವತ್ತರ ಹೊತ್ತಿಗೆ, ಇಂಪ್ರೆಷನಿಸಮ್, ಕ್ಯೂಬಿಸಂ, ಫ್ಯೂಚರಿಸಂ, ಸರ್‍ರಿಯಲಿಸಂ ಮತ್ತು ಅನೇಕ ಸಂಪ್ರದಾಯಗಳು ಪ್ರಚಲಿತವಿದ್ದುವು. ಈ ಸಂಪ್ರದಾಯಗಳ ಪ್ರವರ್ತಕರೇ ಹಿಂದಿನ ಮುಂದಿನ ಸಂಪ್ರದಾಯಗಳನ್ನು ಆಗಾಗ್ಗೆ ಪಿಂಗ್‌ಪಾಂಗ್ ಆಟದಂತೆ, ತ್ವರಿಗತಿಯಲ್ಲಿ ತಾವೇ ಬದಲಾಗುತ್ತಿದ್ದರು. ಹೊಸ ಹೊಸ ಮಾರ್ಗಗಳನ್ನು ಅನ್ವೇಷಣೆ ಮಾಡಿದ ತರುಣ ಕಲಾವಿದರು ಕಲಾಪ್ರಪಂಚದಲ್ಲಿ ಕೋಲಾಹಲವನ್ನೆಬ್ಬಿಸಿದ್ದರು. ಇದರಿಂದ ಹೆಬ್ಬಾರರು ಮನೋಕ್ಷೋಭೆಗೊಳಗಾಗಿ ತಾಯ್ನಾಡಿಗೆ ಮರಳಿ, ಸ್ವಲ್ಪಮಟ್ಟಿಗೆ ಗೊಂದಲಕ್ಕೊಳಗಾದರು. ನಮ್ಮ ದೇಶದ ಜಾನಪದ ಹಾಗೂ ಶಾಸ್ತ್ರಿಯಕಲೆಯ ಪ್ರಾಮುಖ್ಯತೆಯನ್ನು ಅವರು ಪುನಃ ಮೌಲ್ಯ ನಿರ್ಧಾರ ಮಾಡತೊಡಗಿದರು. ಐವತ್ತರ ಹೊತ್ತಿಗೆ ಪಶ್ಚಿಮ ದೇಶದ ಕಲೆ ಎರಡು ಆಯಾಮಗಳನ್ನು ತಳೆಯಿತು. ಅಂದರೆ ಪ್ರಾಚೀನ ಕಲೆ ಹಾಗೂ ಜಾನಪದ ಕಲೆಯ ಅತ್ಯಾವಶ್ಯಕ ಗುಣಮಟ್ಟ "ಕಲೆಯಲ್ಲಿನ ಸರಳ ಅರ್ಥವನ್ನು ಧ್ವನಿಸುವಂತಹ ಸಂಪತ್ತುಗಳು ಅಂದರೆ ರೇಖೆ, ರೂಪ, ಬಣ್ಣ ಮತ್ತು ಸ್ಥಳ ಇವುಗಳು ಬೇರೆ ಬೇರೆ ಭಾವನೆಗಳನ್ನು ಉಂಟುಮಾಡುತ್ತವೆ. ಈ ಸೆಳೆತಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗಲು ನಾನು ತಯಾರಾಗಿರಲಿಲ್ಲ. ಅದಕ್ಕೆ ಬದಲಾಗಿ ನಾನು ಎಲ್ಲಿ ನಿಲ್ಲಿಸಿದ್ದೆನೋ ಅಲ್ಲಿಂದಲೇ ಪ್ರಾರಂಭಿಸಬೇಕೆಂದು ತೀರ್ಮಾನಿಸಿಕೊಂಡೆ. ಪಶ್ಚಿಮದವರಿಂದ ನಾನು ಕಲಿತ ವಿವಿಧ ಕಲಾತ್ಮಕ ಅಂಶಗಳನ್ನು ನನ್ನ ಕಲಾಕೃತಿಗಳಲ್ಲಿ ಸಮನ್ವಯಗೊಳಿಸಬೇಕೆಂದು ನಿಶ್ಚಯಿಸಿದೆ. ಇದು ಮಂದಗತಿಯ ಕಾರ್ಯವಿಧಾವಾಗಿತ್ತು.

## ಪ್ರಯೋಗಶೀಲ

ಹೆಬ್ಬಾರರು ಈ ಅವಧಿಯಲ್ಲಿ ಯಾವುದೇ ಕಲಾಕೃತಿಗಳನ್ನು ರಚಿಸದೆ, ಗಿರಿಧಾಮವಾದ ಮಹಾಬಲೇಶ್ವರಕ್ಕೆ ಹೋದರು. ಅಲ್ಲಿ ಸುಮಾರು ಒಂದು ವರ್ಷದ ಅವಧಿಯಲ್ಲಿ ಅವರು ತಮ್ಮ ಕೃತಿಗಳಲ್ಲಿ ಅನೇಕ ಪ್ರಯೋಗಗಳನ್ನು ಸಾಧಿಸಲು ಅವಕಾಶವಾಯಿತು. ಅವರೊಂದಿಗೆ ಅವರ ಹೆಂಡತಿ ಮತ್ತು ಮೂರು ಜನ ಮಕ್ಕಳು ಇದ್ದರು. ಅವರು ಐದು ವರ್ಷಗಳ ದೊಡ್ಡ ಮಗಳು ರೇಖಾ ಶಾಲೆಗೆ ಹೋಗಿ, ತನ್ನ ಪಾಠ ಪ್ರವಚನಗಳಲ್ಲಿ ತೊಡಗುವ ಬದಲು ವಿವಿಧ ರೂಪದ ಸಣ್ಣ ಸಣ್ಣ ಚಿತ್ರ ರಚಿಸತೊಡಗಿದಳು. ಬಣ್ಣದೊಂದಿಗೆ

ಆಟವಾಡುತ್ತಿದ್ದಳು. ಹೆಬ್ಬಾರರ ನಿರಾಶ ಪ್ರವೃತ್ತಿಗೆ ರೇಖಾಳ ಸಮೃದ್ಧ ಪ್ರತಿಭಾ ಸೃಷ್ಟಿ ಸವಾಲಾಯಿತು. ಬೆಟ್ಟಗುಡ್ಡಗಳಿಂದ ಸುತ್ತುವರಿದಿದ್ದ ಅವರ ನಿವಾಸ. ಕಣಿವೆಯ ಜನ ಮತ್ತು ಆಡಂಬರಹಿತ ಗ್ರಾಮಸ್ಥರು ಎಲ್ಲವೂ ಅವರಿಗೆ ಸ್ಫೂರ್ತಿದಾಯಕವಾಗಿತ್ತು. "ನನ್ನ ಪ್ರಯೋಗಗಳಲ್ಲಿ ನಾನು ತಲ್ಲೀನನಾಗಿದ್ದೆ. ನನ್ನ ಕಲಾಕೃತಿಗಳೆಲ್ಲವೂ ತನ್ನ ಭಾವನೆ ಮತ್ತು ವಿಚಾರಗಳನ್ನು ಅಭಿವ್ಯಕ್ತಗೊಳಿಸಬೇಕು. ರೂಢಿ ಮತ್ತು ಸಂಪ್ರದಾಯಗಳಿಂದ ಮುಕ್ತವಾಗಿರಬೇಕು. ಸರಳವಾಗಿದ್ದು ಅರ್ಥಪೂರ್ಣವಾಗಿರಬೇಕು ಎಂಬುದೇ ನನ್ನ ಬಯಕೆ. ಒಂದು ವಿಶಾಲ ಕ್ಯಾನ್‌ವಾಸ್ ಮೇಲೆ ಒಂದು ಬಿಂದು ಇಟ್ಟರೆ, ಬಣ್ಣದ ಕಲೆಯಾಗಿಯೂ ಕಾಣಬಹುದು ಅಥವಾ ಅನಂತ ಆಕಾಶದಲ್ಲಿ ಮಂತ್ರ ಮುಗ್ಧಗೊಳಿಸುವ ಮಿನುಗುತಾರೆಯಾಗಿಯೂ ಕಾಣಬಹುದು. ಹೀಗೆ ಭಾವನೆಯಾಗಬೇಕಾದರೆ ಕ್ಯಾನ್‌ವಾಸ್ ಮೇಲೆ ಆ ಬಿಂದು ಆಕ್ರಮಿಸಿರುವ ಜಾಗ ಮತ್ತು ಬಣ್ಣದ ತೀವ್ರತೆ ಇವೆರಡು ಪರಿಣಾಮ ಉಂಟುಮಾಡುವಂಥ ಪ್ರಮುಖ ಅಂಶಗಳು" ಎನ್ನುವ ಅವರು ಕಲೆಯ ದಾರಿಯಲ್ಲಿ ಬದಲಾಗುತ್ತಾ ಹೋಗಿರುವುದನ್ನು ಕಾಣಬಹುದು. ಅವರ ಕಲಾಕ್ಷೇತ್ರದ ದುಡಿಮೆಯಲ್ಲಿ ಹಿಂದೆ ಕಾಣದ ಗಟ್ಟಿತನ, ಪ್ರಾಮಾಣಿಕತೆ ನಿಷ್ಠೆ ಕಾಣುತ್ತದೆ.

ಅವರ ನಿವಾಸದ ಎದುರು ಕಂಗೊಳಿಸುತ್ತಿದ್ದ ಪರ್ವತಶ್ರೇಣಿಯು ಅವರಿಗೆ ಸ್ಫೂರ್ತಿಯ ನೆಲೆಯಾಯಿತು. ಪರ್ವತಶ್ರೇಣಿಯ ಸೌಂದರ್ಯವನ್ನು ದಿನದ ವಿವಿಧ ಸಮಯಗಳಲ್ಲಿ ಅವರು ವೀಕ್ಷಿಸುತ್ತಿದ್ದು ಭೂಖಂಡದ ಮಾನವನ ಸಹಜ ಭಾವನೆಗಳ ಏರಿಳಿತಗಳನ್ನು ತೋರುತ್ತಿದೆಯೆಂದು ಅವರು ಕಲ್ಪಿಸಿಕೊಂಡರು. ಪರ್ವತಶ್ರೇಣಿಯ ತಗ್ಗು ದಿಣ್ಣೆಗಳಲ್ಲೂ, ಗಿಡಮರಗಳಲ್ಲದ ತಾಳಬದ್ಧವಾದ ಚಲನವಲನಗಳು ಇವೆಯೆಂದು ಬಾವಿಸಿದರು. ಭಾರತೀಯ ಸೂಕ್ಷ್ಮರೂಪ ಚಿತ್ರವಾದ 'ಪ್ರಕೃತಿ ದೃಶ್ಯ' ಚಿತ್ರವು ಒಂದು ಪ್ರತ್ಯೇಕ ಚಿತ್ರ ಪ್ರಕಾರವಾಗಿಲಿಲ್ಲ. "ನಾನು ಈ ಪರ್ವತಶ್ರೇಣಿಗಳಿಗೆ ಒಂದು ವ್ಯಕ್ತಿತ್ವವನ್ನು ಕೊಟ್ಟು ಮತ್ತು ಅಲ್ಲಲ್ಲಿ ಹರಡಿಕೊಂಡಂತೆ ಬಣ್ಣ ಬಳಿದು ವಿವಿಧ ಭಾವನೆ ಪರಿವರ್ತನೆಗಳನ್ನು ಚಿತ್ರಿಸಬೇಕೆಂದು ಯೋಚಿಸಿ, ಆಕಾರ ಮತ್ತು ಅಂಥಸತ್ವಗಳ ಸಮನ್ವಯವನ್ನು ಚಿತ್ರಿಸಲು ಪ್ರಯತ್ನಿಸಿದೆ" ಅದೇ ಸಹ್ಯಾದ್ರಿ ಶ್ರೇಣಿಗಳನ್ನು ಎರಡು ದಶಕಗಳ ತರುವಾಯ 1972ರಲ್ಲಿ ನೂತನ ದೃಷ್ಟಿಕೋನದಿಂದ ಕ್ರಿಯಾತ್ಮಕವಾದ ಸತ್ವವುಳ್ಳ ಚಿತ್ರಗಳನ್ನಾಗಿ ರಚಿಸಿದರು. ಅವರ ಹಿಂದಿನ ಕಲಾಕೃತಿಗಳು ಪ್ರಕಟಣೆಗೆ ನಿಕಟವಾಗಿದ್ದು ಅಲಂಕಾರ ಪೂರ್ಣವಾಗಿದ್ದವು.ಹಾಗೆಯೇ ಅನಿರ್ಬಂಧಿತ ಅಗ್ನಿಜ್ವಾಲೆಯಂತೆ



ಗಗನಕ್ಕೇರಬೇಕೆಂತಲೂ ಬಯಸಿದ್ದರು. ಆ ತರುವಾಯ ಕೆಲವು ಅಮೂರ್ತ ಚಿತ್ರಗಳನ್ನು ರಚಿಸಿದರು. 'ಘಾಟ್ ರಸ್ತೆ,' 'ಕೊಯ್ನಾ ಕಣಿವೆ', ಮತ್ತು 'ಸಹ್ಯಾದ್ರಿ' ಇವುಗಳಲ್ಲಿ ಪ್ರಾಯಶಃ ಹೊಸ ಆಯಾಮದಲ್ಲಿ ಜೀವನವನ್ನು ಅನುಭವಿಸುವ ವಿಕಾಸಶೀಲ ಆಂತರಿಕ ಸ್ವಾತಂತ್ರ್ಯ ಅಭಿವ್ಯಕ್ತಗೊಳಿಸಿರುವುದನ್ನು ಕಾಣಬಹುದು.

1953ರಲ್ಲಿ ಹೆಬ್ಬಾರರು ಪುನಃ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಯೋರೋಪಿನ ಪೂರ್ವ ಹಾಗೂ ಪಶ್ಚಿಮ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದರು. ಆ ದೇಶದ ಅಂತರ್ನಿಹಿತವಾದ ಮೌಲ್ಯಗಳನ್ನು ಅಂಗೀಕರಿಸಿದರು. **'ಭೂಮಿಯ ಒಡೆಯ'** ಎಂಬ ಚಿತ್ರವನ್ನು ರಚಿಸಿದರು. ಈ ಚಿತ್ರದಲ್ಲಿ ಆಕಾರ ಸಂಬಂಧವಾದ ಅಂಶಗಳನ್ನು ನಿರ್ಲಕ್ಷಿಸಿದ ಸಾಮಾಜಿಕ ಯಥಾರ್ಥತೆಯನ್ನು ನಿರೂಪಿಸಿದ್ದಾರೆ. ಈ ಅವಧಿಯಲ್ಲಿ ಅವರು ರಚಿಸಿದ **'ಮಹೀಮ ದರ್ಗ'** ಎಂಬ ಕಲಾಕೃತಿ ರಚನಾ ಸಂಯೋಜನ ಗುರಿ ಇರುವ ಪ್ರಕೃತಿ ದೃಶ್ಯದ ವರ್ಣ ಚಿತ್ರವಾಗಿದೆ. ಈ ಕಲಾಕೃತಿಗೆ 1956ರಲ್ಲಿ ಪ್ರಥಮ ಬಾರಿಗೆ ಕೇಂದ್ರ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ ದೊರಕಿತು. **'ಲಯ'** ಮತ್ತು **'ಹೊಲದ ಹಾಡು'** ಎಂಬ ಕಲಾಕೃತಿಗಳಿಗೆ ಕ್ರಮವಾಗಿ 1957, 1958ರಲ್ಲಿ ಅಕಾಡೆಮಿಯ ಪ್ರಶಸ್ತಿ ದೊರಕಿತು. ಈ ಮೂರು ಚಿತ್ರಗಳಲ್ಲಿ ರಚನಾ ವಿನ್ಯಾಸದ ಗುಣಮಟ್ಟವನ್ನು ಮತ್ತು ಆಯಾಮಗಳ ಅಂಶವನ್ನು ಮುಂದುವರಿಸಿದ್ದಾರೆ. ಇಲ್ಲಿ ಬಣ್ಣ ಕಲಿಸುವ ಚಾಕುವಿನಿಂದ ವರ್ಣವನ್ನು ಪ್ರಭಾವಯುಕ್ತವಾಗಿ ಬಳಸುವ ಮೂಲಕ ವಿನ್ಯಾಸವನ್ನು ಸಾಧಿಸಿದ್ದಾರೆ. ಅವರು ಕೆಲವು ಚಿತ್ರಗಳನ್ನು ಮನಸ್ಸಂತೋಷಕ್ಕಾಗಿ ಕಾರ್ಮಿಕರ ಜೀವನ ಮತ್ತು ಸುಖ-ದುಃಖಗಳ ಕಡೆ ಗಮನಹರಿಸಿ ಮಾನವೀಯ ಕರುಣೆ ಅನುಕಂಪಗಳ ಬಗ್ಗೆ ಅವರ ಅಂತರಾತ್ಮ ಮನಕರಗಿ ಮುಂದೆ ಅನೇಕ ಚಿತ್ರಗಳನ್ನು ರಚಿಸಿದರು.

ಹೆಬ್ಬಾರರ ಬಾಳಿನಲ್ಲಿ ಎಂದೂ ಮರೆಯಲಾಗದ ವ್ಯಕ್ತಿ, ತಾಯಿ ಸೀತಮ್ಮ. ಅವರು ಇಂದೂ ಕಲಾವಿದರಾಗಿ ಮೇಲೆ ಬಂದುದು ಆಕೆಯ ತ್ಯಾಗ ಮತ್ತು ಪ್ರೋತ್ಸಾಹದಿಂದ. ತಮ್ಮ ಜೀವನ ಗುರಿ ಮುಟ್ಟಲು ತಾಯಿ ಸ್ಫೂರ್ತಿಯಾಗಿ ನಿಂತು ಮಗನ ಬೆಳವಣಿಗೆಯನ್ನು ಕಂಡು ಆನಂದಿಸಿದರು. ಆದರೆ ಆಕೆ 1959ರ ನವೆಂಬರ್ 11 ರಂದು ಮುಂಬಯಿಯ ಒಂದು ಸ್ಥಳೀಯ ಆಸ್ಪತ್ರೆಯಲ್ಲಿ ನಿಧನರಾದರು. ಹೆಬ್ಬಾರರಿಗೆ ತಾಯಿಯ ಸಾವಿನಿಂದ ದೊಡ್ಡ ಅಘಾತವಾಯಿತು. ಆಕೆಯ ಸಾವು ಮರೆಯಲಾಗದ ಸನ್ನಿವೇಶವಾಗಿತ್ತು. "ನನ್ನ ತಾಯಿಯನ್ನು ನಾನು ಕೊನೆಯ ಬಾರಿಗೆ ನೋಡಿದ್ದ ಸಂದರ್ಭ ಮನ ಕರಗಿಸುವ, ಮರೆಯಲಾಗದ ಕ್ಷಣವಾಗಿತ್ತು. ಈ ದೃಶ್ಯವನ್ನು ನಾನು

ಕ್ಯಾನ್‌ವಾಸಿನ ಮೇಲೆ ಮೂಡಿಸಿದೆ. ನನ್ನ ತಾಯಿ ಮಲಗಿದ್ದ ಗಡಿಯ ಸರಳರೇಖೆ, ರೂಢಿ ಮತ್ತು ಸಂಪ್ರದಾಯವಲ್ಲದ ಮಾರ್ಗದಲ್ಲಿ ಕ್ಯಾನ್‌ವಾಸ್ಸನ್ನು ಇಬ್ಭಾಗ ಮಾಡುವ ಆಕೆಯ ಮುಖದಿಂದ ಹೊಮ್ಮುತ್ತಿರುವ ಕಲ್ಪನಾತ್ಮಕ ಕ್ಷಕಿರಣ ಬೆಳಕು, ಒಂದು ಕಡೆ ನಿಂತಿರುವ ದಾದಿ ಮತ್ತು ಲಂಬ ರೇಖೆಗಳನ್ನು. ಇನ್ನೊಂದು ಕಡೆ ದುಃಖತಪ್ತರಾದ ಸಂಬಂಧಿಕರು ಇಡೀ ಕ್ಯಾನ್‌ವಾಸನ್ನು ಧೃಡರಚನಾ ವಿನ್ಯಾಸದಲ್ಲಿ ಹೆಣೆದಿರುವಂತೆ ಕಾಣುತ್ತದೆ. ಈ ಸಹಜ ಅಭಿವೃದ್ಧಿಯಿಂದ ನನ್ನ ಕಲಾಕೃತಿಗಳಲ್ಲಿ ಒಂದು ಅಂಶವನ್ನು ಕಂಡುಕೊಂಡೆ. ಅಂದೆದರೆ ಅರ್ಥಗರ್ಭಿತ ಸ್ಥಳದ ವ್ಯವಸ್ಥೆ" ಈ ಕಲಾಕೃತಿಯನ್ನು ಈ ಚಿತ್ರ ವೆಂಕಟಪ್ಪ ಚಿತ್ರ ಶಾಲೆಯ ಹೆಬ್ಬಾರ್ ವಿಭಾಗದಲ್ಲಿದೆ.

1971 ಹೆಬ್ಬಾರರ ಚಿತ್ರಗಳಲ್ಲಿ ಬಾಂಗ್ಲಾ ದೇಶದ ದುರಂತ ಮತ್ತು ನಿರಾಶ್ರಿತರನ್ನು ಮೂಡಿಸುಂತೆ ಪ್ರೇರೇಪಿಸಿತು. ಈ ಕೃತಿಗಳಲ್ಲಿ ಸ್ಥಳ ನಿರೂಪಣೆಯೂ ಮೇಲ್ಕಂಡ ಚಿತ್ರಣದಂತೆಯೇ ಇದೆ. ಚಿತ್ರದಲ್ಲಿ ಕೆಂಪು, ಕಪ್ಪು, ಕಂದು, ಬಣ್ಣಗಳಿಂದ ರಕ್ತದ ಹೊಲೆ ಹರಿಯುತ್ತಿದೆ. ಬಲಭಾಗದಲ್ಲಿ ಬಾಂಗ್ಲಾ ದೇಶದಲ್ಲಿ ನಡೆಯುತ್ತಿರುವ ನರಮೇಧದ ಭಯಂಕರ ದೃಶ್ಯ. ಸೈನಿಕರ ಕ್ರೌರ್ಯದ ಸಾಂಕೇತಿಕವಾಗಿ ಬಣ್ಣಗಳ ಚೆಲ್ಲಾಟ, ದುಃಖದೊಡನೆ ಮುಂದೇನು ಎಂದು ದಿಕ್ಕು ಕಾಣದ ಮನುಷ್ಯಾಕೃತಿಗಳು. ಅವರ ಹತ್ತು ವರ್ಷಗಳ ಅನುಭವದ ಮೇಲೆ ಉಂಟಾದ ಬದಲಾವಣೆ ಎಂದರೆ ಮೊದಲನೆ ವರ್ಣಚಿತ್ರ ನಿರೂಪಣಾತ್ಮಕವಾಗಿಯೂ ಮತ್ತು ಎರಡನೆಯದು ಅಭಿವ್ಯಕ್ತಿ ರೂಪದಲ್ಲಿಯೂ ಇದೆ. ಇದು ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್, ನವದೆಹಲಿಯಲ್ಲಿದೆ.

"ಕಲೆಗಾರನಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವುದುಂಟು. ಕೆಲವೊಮ್ಮೆ ಪ್ರತ್ಯಕ್ಷವಾಗಿ, ಕೆಲವೊಮ್ಮೆ ಪರೋಕ್ಷವಾಗಿ, ಆದರೆ, ಕಲಾಕಾರನ ಮನಸ್ಸು, ಬುದ್ಧಿಶಕ್ತಿ ಸರ್ವದಾ ಜಾಗೃತವಾಗಿದ್ದು, ಸಂವೇದನಾಶೀಲವಾಗಿರಬೇಕು ಎನ್ನುವುದಂತೂ ಅತ್ಯವಶ್ಯಕ. ಸಮಾಜದ ಕೋಟಲೆ, ಸಂಘರ್ಷ, ನಿರಾಶೆ ಹಾಗೂಉಲ್ಲಾಸ. ದ್ವಂದ್ವ–ಇವೆಲ್ಲವೂ ಕಲಾಕಾರನ ಸಂವೇದನಾಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತದೆ. ಒಂದು ಸಫಲ ಕಲಾಕೃತಿ ಕೇವಲ ಬುದ್ಧಿಮತ್ತೆಯಿಂದಲೇ ಜನಿಸುವುದಿಲ್ಲ. ಬೌದ್ಧಿಕತೆ ಮತ್ತು ಭಾವುಕತೆಗಳು ಸಮ್ಮಿಶ್ರಣಗೊಂಡಿರುವುದು ಅಗತ್ಯ. ಪ್ರಕೃತಿಯನ್ನೂ ಚಾಚೂತಪ್ಪದೆ ಚಿತ್ರಿಸುವುದಲ್ಲ ಕಲೆ, ನನ್ನ ಅಭಿಪ್ರಾಯದಲ್ಲಿ ಯೌವನಭರಿತ ಹೆಣ್ಣಿಗೂ, ಸುಂದರ ಹೂವಿಗೂ ಯಾವ ಭೇದವೂ ಇಲ್ಲ. ಈ ಎರಡು ಸುಂದರ ವಸ್ತುಗಳೂ ಸಮಾನವಾಗಿ



ನನ್ನ ಮನಸ್ಸನ್ನು ಪ್ರಭಾವಿತಗೊಳಿಸಬಲ್ಲವು. ಅವುಗಳ ಮೂರ್ತರೂಪ ನನಗೆ ಅಷ್ಟು ಮಹತ್ವದಲ್ಲ. ಪ್ರತಿಯೊಂದು ವಸ್ತುವಿನಲ್ಲಿಯೂ ಅಂತರ್ಗತವಾದ ಯಾವುದೊ ಲಯ ಅಡಗಿ ಕುಳಿತಿದೆ. ಆ ಲಯಬದ್ಧತೆಯನ್ನು ನನ್ನ ಕೃತಿಯಲ್ಲಿ ಪ್ರಕಟಪಡಿಸುವ ಪ್ರಯತ್ನ ಮಾಡುತ್ತೇನೆ" ಎನ್ನುವ ಅವರು ತೀವ್ರ ವೈಯುಕ್ತಿಕ, ತೀವರ ಭಾವನೆಗಳಿಂದ ಅಭಿವ್ಯತಗೊಳಿಸುತ್ತಾರೆ. ರೂಪ ಆಕಾರಗಳನ್ನು ಸ್ವಾಧೀನಪಡಿಸಿಕೊಂಡು ಅವರ ಊಹಾಶಕ್ತಿ ವರ್ಣಗಳನ್ನು ಸ್ವಾಧೀನಪಡಿಸಿಕೊಂಡು ಅವರ ಊಹಾಶಕ್ತಿ ವರ್ಣಗಳನ್ನು ಸಂಯೋಜಿಸುತ್ತಾರೆ. **'ಹುಂಜಗಳ ಕಾಳಗ'**ವನ್ನು ಬಾಲಿ ದ್ವೀಪದಲ್ಲಿ ನೋಡಿದರು. ಅದನ್ನು ಚಿತ್ರಿಸಿದ್ದು, ರಕ್ತದ ಮಡುವಿನಲ್ಲಿ ಸಾಯುತ್ತಿರುವ ಹುಂಜ, ಅದರ ಮುಖದ ಮೇಲಿನ ವೇದನೆ, ಸುತ್ತಲೂ ಮುಳ್ಳುಬೇಲಿ ಹಾಕಿದಂತೆ ಕಂಡುಬರುತ್ತಿರುವ ವೀಕ್ಷಕರ ಕೈ ಬೆರಳುಗಳು, ಕಪ್ಪು ಛಾಯೆಯಲ್ಲಿ ಅವರು ಕರಾಳವೂ, ತೀಕ್ಷ್ಣವೂ ಆದ ಕಣ್ಣುಗಳು. ಇವು ತೀವ್ರಸಂವೇದನೆಯಿಂದ ಅಭಿವ್ಯಕ್ತಿಗೊಂಡಿವೆ. ಇದು ಅವರು ರಚಿಸಿದ ಉತ್ತಮ ಕೃತಿಗಳಲ್ಲಿ ಒಂದು.

ಕಲಾವಿದನಿಗೆ ಸಾಮಾಜಿಕ ಕಳಕಳಿ ಇರುತ್ತದೆ ಎನ್ನುವುದಕ್ಕೆ ಹೆಬ್ಬಾರರು ರಚಿಸಿರುವ ಅನೇಕ ಚಿತ್ರಗಳು ಸಾಕ್ಷಿ. ವಿಯಟ್ನಾಂ ಯುದ್ಧದಲ್ಲಿ ಅಮೆರಿಕನ್ ಸೈನಿಕರು ಅತ್ಯಾಚಾರ ನಡೆಸಿದ ಸನ್ನಿವೇಶ ಅವರ ಮನಸ್ಸನ್ನು ನೋಯಿಸಿ, ಯುದ್ಧದ ಭೀಕರತೆ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರುವುದು ಎಂಬುದನ್ನು **'ಮೈಲೆ'** ಚಿತ್ರದಲ್ಲಿ ಚಿತ್ರಿಸಿದ್ದಾರೆ. ರಕ್ತರಂಜಿತವಾದ ಬೆತ್ತಲೆ ಸ್ತ್ರೀ ಬಿದ್ದಿದ್ದು, ಹಿಂದೆ ವಿಯಟ್ನಾಂ ಜನತೆ ಅಸಹಾಯಕರಾಗಿ ನಿಂತಿದ್ದಾರೆ. ಅಮೆರಿಕನ್ ಸೈನಿಕರ ಬಂದೂಕುಗಳ ಹೋರಾಟವನ್ನು ರೇಖೆಗಳಲ್ಲಿ ಗುರ್ತಿಸಿದ್ದಾರೆ. ಇಂತಹ ಮನ ಕದಡಿದ ಘಟನೆಗಳು ನಡೆದಾಗ, ಸ್ವತಹ ಮನಕರಿಗಿ ಅವುಗಳನ್ನು ಚಿತ್ರಗಳನ್ನು ಚಿತ್ರಗಳಲ್ಲಿ ಮೂಡಿಸಿದ್ದಾರೆ.

ಅವರು 1961ರಲ್ಲಿ ಹಂಪೆಗೆ ಭೇಟಿಯಿತ್ತು. ವಿಜಯನಗರ ಸಾಮ್ರಾಜ್ಯದ ಭಗ್ನಾವಶೇಷಗಳನ್ನು ನೋಡಿ ಚಕಿತಗೊಂಡು ಸಂತೋಷಪಟ್ಟರು. ಭಗ್ನಶಿಲಾಕೃತಿಗಳ ಪುರಾಣ ಕಥೆಗಳ ವಿಷಯಗಳನ್ನು ನಿರೂಪಿಸುವ ಸಚಿತ್ರ ಪ್ರತಿರೂಪವನ್ನು ಸೃಜಿಸುವ ಒಂದು ಯೋಜನೆ ಬಂದು, ಆ ತರುವಾಯ ಅವರು ಬರೆದ ಚಿತ್ರಗಳನ್ನು **'ಶಿಲೆಯಲ್ಲಿ ವೀರಗಾಥೆ'** ಎಂದು ಕರೆದರು. ಹಾಗೆಯೇ **'ಕಾವ್ಯೋದಯ'** ವಾಲ್ಮೀಕಿ ಮಹರ್ಷಿಯು ತನ್ನ ಮೊದಲಿನ ಜೀವನದಿಂದ ಹೊಸ ಬದುಕಿಗೆ ದಾರಿಯಾಗುವ ರಾಮಾಯಣದ ಕಥೆ ಬರೆಯಲು ಆದ ಘಟನೆ. ಈ ಕಲಾಕೃತಿ ನ್ಯಾಷನಲ್ ಗ್ಯಾಲರಿ ಆಫ್

ಮಾಡರ್ನ್ ಆರ್ಟ್, ದೆಹಲಿಯಲ್ಲಿದೆ. ಇನ್ನೊಂದು ಚಿತ್ರ 'ಬಾಂಗ್ಲಾ ದೇಶದ ಉದಯ' ಇವೆರಡು ಕ್ಯಾನವಾಸಿನ ಮೇಲೆ ಸಮಾಂತರ ಆಕೃತಿಗಳಲ್ಲಿವೆ. ಕ್ಯಾನವಾಸಿನ ಮೇಲ್ಮೆಯಲ್ಲಿ ಸ್ಮಾರಕ ಶಾಸನಗಳಂತೆ ಮಾನವ ಚಿತ್ರಗಳನ್ನು ಬರೆಯಲಾಗಿದೆ. ಕೆಳಗೆ ಅದೃಶ್ಯರಾದ ಜನಾಂಗ ಮತ್ತು ಮೇಲ್ಭಾಗದಲ್ಲಿ ಉದಯವಾಗುತ್ತಿರುವ ಸೂರ್ಯನಡೆಗೆ ಸ್ವಾತಂತ್ರ್ಯ ಪಡೆದು ಉತ್ಸುಕರಾಗಿ ಧಾವಿಸುತ್ತಿರುವ ಜನತೆ. ಇಲ್ಲಿ ಸ್ಥಳ ಮತ್ತು ಕಾಲದ ಪ್ರಜ್ಞೆಯ ಸಮಗ್ರತೆಯನ್ನು ಸಾಧಿಸಲು ಅವರು ಪ್ರಯತ್ನಿಸಿದ್ದಾರೆ. ಅನಂತರ ರಚಿಸಿದ ಕಲಾಕೃತಿಗಳಲ್ಲಿ ಸಾಂಕೇತಿಕ ನಿರೂಪಣೆ ಸ್ಪಷ್ಟವಾಗಿದೆ.

## ವೈಜ್ಞಾನಿಕ ಅನ್ವೇಷಣೆಯ ಕೃತಿಗಳು

ಹೆಬ್ಬಾರರಿಗೆ 1962ರ ನಂತರ ವಿಜ್ಞಾನದ ಅಂತರಿಕ್ಷ ಅನ್ವೇಷಣೆಗಳು ಮನಸ್ಸಿನ ಮೇಲೆ ಪ್ರಭಾವವನ್ನುಂಟುಮಾಡಿದವು. ವೈಜ್ಞಾನಿಕ ಅನ್ವೇಷಣೆಗಳಲ್ಲಿ ಅವರ ಆಸಕ್ತಿಯಿಂದಾಗಿ ರಚಿತವಾದ ಚಿತ್ರಗಳೆಂದರೆ 'ರಾಕೆಟ್'–ಇದು ಈ ಸರಣಿಯಲ್ಲಿ ಮೊದಲ ಚಿತ್ರ, ಅನಂತರ 'ಆಸ್ಪಿರೇಷನ್', 'ಬರ್ತ್ ಆಫ್ ಮೂನ್ ಗಜಲಕ್ಷ್ಮಿ', 'ಸರ್ಚ್ ಇನ್ ಟೂ ದ ಸ್ಪೇಸ್', 'ಬ್ರಿಡ್ಜ್ ಟೂ ದ ಮೂನ್', 'ಶರದ್ ಪೂರ್ಣಿಮಾ', 'ಇನ್ ಸ್ಪೇಸ್' ಮೊದಲಾದವು.

"ನಾನಿರುವ ಈ ಶತಮಾನದ ವೈಜ್ಞಾನಿಕ ಅನ್ವೇಷಣೆಗಳಿಂದ ಪ್ರೇರಿತನಾಗಿ ನನ್ನ ವಿಷಯವನ್ನು ಅಭಿವ್ಯಕ್ತಿಸಲು ನಾನು ಪ್ರಾರಂಭಿಸಿದೆ. ನನ್ನ ಶೈಲಿಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಸ್ವಾಭಾವಿಕವಾಗಿ ತಲೆದೋರಿತು. ಶೈಲಿಯಲ್ಲಿ ಕಾಣುತ್ತಿರುವ ವ್ಯತ್ಯಾಸವೆಂದರೆ ಮುಖ್ಯವಾಗಿ ನನ್ನ ಕಾರ್ಯವಿಧಾನಕ್ಕೆ ಸಂಬಂಧಿಸಿದ್ದು. ಅದನ್ನು ಕಲಾಕೃತಿ ರಚನೆಗಳ ಚೌಕಟ್ಟಿನಲ್ಲಿ ರಚಿಸಿರುವುದಕ್ಕಿಂತ ಭಾವಾವೇಶಕ್ಕೆ ಒಳಗಾಗಿ ರಚಿಸಿದ್ದೇನೆ ನಾನು ಒಂದು ಚಿತ್ರದಲ್ಲಿ ರೇಖೆಯನ್ನು ಎಳೆಯುವಾಗ ಕ್ಯಾನವಾಸ್ ಮೇಲೆ ನೇರವಾಗಿ ಬಣ್ಣದಟ್ಯೂಬನ್ನು ಒತ್ತಿದ್ದೇನೆ. ಬೇರೊಂದರಲ್ಲಿ ಬಣ್ಣಗಳ ವ್ಯತ್ಯಾಸದಿಂದರೇಖೆಯನ್ನು ಎಳೆದಿದ್ದೇನೆ, ಎನ್ನುವ ಅವರ ಈ ಕೃತಿಗಳಲ್ಲಿ ವಿಶೇಷ ಪ್ರಯತ್ನವಿದೆ. ಅಗೋಚರ ವಸ್ತುಗಳು ಸ್ವಾಭಾವಿಕವಾಗಿ ಸೇರಿಕೊಂಡಿವೆ. ಈ ಕೃತಿಗಳು ತನ್ನದೇ ಆದ ತರ್ಕವನ್ನು ಪಡೆದಿದ್ದು, ಅವು ಈ ಕ್ಯಾನವಾಸ್ ಮೇಲೆ ಮೂಡಿರುವುದನ್ನು ಕಾಣುತ್ತೇವೆ. ಪ್ರಾಮಾಣಿಕವಾದ ಚಿಂತನೆಯ ಹೆಬ್ಬಾರರು ಸದಾ ಶೋಧಕರಾಗಿ ತಮ್ಮ ಆಂತರಿಕ ಅನುಭವಗಳನ್ನು ನಿರಂತರವಾಗಿ ಚಿತ್ರಗಳಲ್ಲಿ ಮೂಡಿಸಿದ್ದಾರೆ.



ಸಮಕಾಲೀನ ಕಲೆಯ ಶ್ರೇಷ್ಠತೆಯನ್ನು ಅನ್ಯಾಕ್ರಮಶೀಲವಾದ ಸ್ವದೇಶಪ್ರೇಮ ಅಥವಾ ಸುಗಮವಾದ ಶೈಲಿಗಿಂತ ಸೌಂದರ್ಯದ ಗುಣಮಟ್ಟ ಮತ್ತು ಸಾರ್ಥಕ ಅಭಿಲಾಷೆಯ ಮೇಲೆ ನಿರ್ಧರಿಸಲಾಗಿದೆ. ಅವರ ಅನುಭವ ಬೇರೆ ಬೇರೆ ರೀತಿಯಾಗಿದ್ದರಿಂದ ಕಲಾಕೃತಿ ರಚನೆಗಳ ತತ್ವದಲ್ಲಿ ಮಗ್ನರಾಗಲು ಪ್ರಯತ್ನಿಸಿದರು. ಹಾಗೆಯೇ ನಮ್ಮ ದೇಶದ ರಾಷ್ಟ್ರೀಯ ಜಾನಪದ ಕಲೆಯಿಂದ ಸಮಂಜಸವಾದುದ್ದನ್ನು ಅವರು ಪರಿಗಣಿಸಿದರು. ಅದೇ ಸಮಯದಲ್ಲಿ ಪ್ರಗತಿ ಹೊಂದಿದ್ದ ಕಲೆಯ ವಿವಿಧ ತಂತ್ರಗಳನ್ನು ಮತ್ತು ಆಧ್ಯಾತ್ಮಿಕ ಅಂಶಗಳನ್ನು ಬಳಸಿಕೊಂಡರು.

## ಸಂಗೀತದ ಬಗೆಗಿನ ಕೃತಿಗಳು

ಹೆಬ್ಬಾರರಿಗೆ ಬೇರೆ ಕಲೆಗಳ ಬಗ್ಗೆಯೂ ಬಹು ಆಸಕ್ತಿ. ಇತರ ಕಲೆಗಳ ಬಗ್ಗೆ ಪರಿಚಯವಿರಬೇಕು ಎನ್ನುವ ಅವರು "ನನಗೆ ಭಾರತೀಯ ನೃತ್ಯ ಮತ್ತು ಸಂಗೀತವೆಂದರೆ ಬಹಳ ಹುಚ್ಚು. ನಾನು ನನ್ನ ಮೂವತ್ತನೇ ವಯಸ್ಸಿನಲ್ಲಿ ಕಥಕ್ ನೃತ್ಯವನ್ನು ಎರಡು ವರ್ಷಗಳ ಕಾಲ ಕಲಿತೆ. ಈ ತರಬೇತಿಯು ನನ್ನ ಕಲಾಕೃತಿಗಳಲ್ಲಿ ಲಯದ ಗುಣಮಟ್ಟದ ಸೊಬಗನ್ನು ಸೇರಿಸಲು ತುಂಬಾ ನೆರವಾಯಿತು. 1970ರಲ್ಲಿ ಯಹೂದಿ ಮೆನುಹನ್‌ರ ವಾದ್ಯಗೋಷ್ಠಿಯನ್ನು ಆಲಿಸುತ್ತಿದ್ದಾಗ, ಬಣ್ಣದಲ್ಲಿ ಧ್ವನಿಯನ್ನು ಅಭಿವ್ಯಕ್ತಿಸಲು ಅದರಿಂದ ಸ್ಫೂರ್ತಿ ಪಡೆದೆ. ಸಂಗೀತದ ಮೇಲೆ ಸಾಂಪ್ರದಾಯಿಕ ಭಾರತೀಯ ಚಿತ್ರಕಾರರು ಸೃಜಿಸಿದ ಅನೇಕ ಚಿತ್ರಗಳಿವೆ. ಆದರೆ ಈ ವರ್ಣಚಿತ್ರಗಳು ಸಂಗೀತದ ವಿದ್ವಾಂಸರು ಗೊತ್ತುಪಡಿಸಿದಂತೆ ಅಥವಾ ವಿವರಿಸಿದಂತೆ ವಿವಿಧ ರಾಗಗಳನ್ನು (ಹಾಡು ಮಾದರಿಗಳನ್ನು) ನಿರೂಪಿಸುತ್ತವೆ. ಆದರೆ ಹೆಬ್ಬಾರರು ತಮ್ಮ ಚಿತ್ರಗಳಲ್ಲಿ ಸಪ್ತಸ್ವರ ಸೃಜಿತವಾದ ಸಂಗೀತವನ್ನು ಸಪ್ತವರ್ಣಗಳ ಉಪಯೋಗದಿಂದಿ ಬರೆದು ಯಾವುದನ್ನು ಕಿವಿಯಲ್ಲಿ ಕೇಳಬಹುದೋ ಅದರ ಭಾವನೆಯನ್ನು, ಸ್ವಾರಸ್ಯವನ್ನು ಕಣ್ಣಿಗೆ ಕಾಣಿಸುವ ಪ್ರಯತ್ನವನ್ನು ನಡೆಸಿದರು.

"ಈ ವರ್ಣಚಿತ್ರಗಳನ್ನು ನೋಡಿದ ನನ್ನ ಸ್ನೇಹಿತರೊಬ್ಬರು ಕ್ಯಾನವಾಸಿನ ಮೇಲೆ ಕಲಾಕೃತಿ ರಚಿಸುವಾಗ ನನ್ನ ಮನಸ್ಸಿನಲ್ಲಿ ಯಾವುದೇ ಒಂದು ನಿಶ್ಚಿತ ರಾಗದ ಭಾವನೆ ಇತ್ತೆ ಎಂದು ಕೇಳಿದರು. ಆದರೆ, ಯಾವುದೇ ರಾಗ ಭಾವ ನನ್ನ ಮನಸ್ಸಿನಲ್ಲಿ ಇರಲಿಲ್ಲ. ಬಣ್ಣದ ಶುದ್ಧ ಅಭಿವ್ಯಕ್ತಿ ಗುಣವನ್ನು ಬಳಸಿ ಕ್ಯಾನವಾಸಿನ ಮೇಲೆ ಸಂಗೀತವನ್ನು ಸೃಷ್ಟಿಸಲು

ಪ್ರಯತ್ನಿಸುತ್ತಿದ್ದೇನೆ. ಸಂಗೀತದಲ್ಲಿ ಧ್ವನಿ ಮಾಧುರ್ಯವೇ ನನಗೆ ಪ್ರಧಾನವಾಯಿತು. ನಾದವೊಂದೇ ಅಲ್ಲ ರಾಗ ವಿನ್ಯಾಸ, ಸ್ವರ ತರಂಗ ಮತ್ತು ಧ್ವನಿ ಸ್ಪಂದಗಳಲ್ಲಿ ಪರಿಪೂರ್ಣವಾಗಿ ಲೀನವಾದೆ. ಈ ಪ್ರಪಂಚದಲ್ಲಿ ಇರಲು ನನ್ನನ್ನು ಏನು ಆಕರ್ಷಿಸುತ್ತಿದೆ ಎಂಬುದು ನನಗೆ ಸಂಪೂರ್ಣವಾಗಿ ಗೊತ್ತು. ಕಣ್ಣಿನಿಂದಲೇ ಸಂಗೀತವನ್ನು ಗ್ರಹಿಸಲು ಕಲಿತುಕೊಂಡೆ" ಎಂದು ತಮ್ಮ ಮನಸ್ಸಿನ ಮೇಲೆ ಆದ ಪ್ರಭಾವವನ್ನು ವಿವರಿಸಿದ್ದಾರೆ. ಸಂಗೀತಗಾರರು ಪ್ರಧಾನವಾಗಿರದೆ ಬೆರಳು ಮತ್ತು ವಾದ್ಯಗಳ ವಿನ್ಯಾಸದಿಂದ ಕೂಡಿದ್ದು. ನಾದ ತರಂಗಗಳನ್ನು ಹೊರಹೊಮ್ಮುವಂತೆ ಅಮೂರ್ತ ರೀತಿಯಲ್ಲಿದ್ದು ಸಂಗೀತ ವರ್ಣದಲ್ಲಿ ಅವಿರ್ಭವಿಸುವಂತೆ ಇರುವುದು ಈ ಚಿತ್ರಗಳ ವೈಶಿಷ್ಟ್ಯ.

## ಮಾನವನನ್ನು ಕುರಿತು ಚಿತ್ರಗಳು

ಹೆಬ್ಬಾರರ ಅನನ್ಯ ಕಲಾಪ್ರತಿಭೆಯು ಮೊದ ಮೊದಲು ಚಿತ್ರಗಳ ರಚನೆಯಿಂದ ಪ್ರಾರಂಭವಾಗಿ ಆ ತರುವಾಯ ಈಗಿನ ಅಭಿವ್ಯಕ್ತಿ ಮತ್ತು ಸಂಕೇತ ಶೈಲಿಗಳ ಕಲಾ ರಚನೆಯಲ್ಲಿ ವಿಕಾಸಗೊಳ್ಳುತ್ತಾ ನಡೆಯಿತು. ಆದರೂ ಈ ಎಲ್ಲ ಹಂತಗಳಲ್ಲೂ ಅವರ ಕಲಾದೃಷ್ಟಿಗೆ ಮಾನವನ ಬದುಕು ಮತ್ತು ಅವನ ಸಾಮಾಜಿಕ ಪರಿಸರಗಳೇ ನಿರಂತರ ಪ್ರೇರಣೆ. ಉದಾಹರಣೆಗೆ 'ಭಿಕ್ಷುಕರು' ಎಂಬ ಕಲಾಕೃತಿಯು ವೀಕ್ಷಕರ ಮನಸ್ಸಿನ ಮೇಲೆ ಬೀರುವ ಪರಿಣಾಮ.

ಮಾನವಾಕೃತಿಯ ರಚನೆಯಲ್ಲಿ ಅಮೂಲಾಗ್ರ ಪರಿವರ್ತನೆ-ಯಾದುದನ್ನು ಸಾವಿರದ ಒಂಬೈನೂರ ಅರವತ್ತರ ದಶಕದ ಮೊದಲ ವರ್ಷಗಳಲ್ಲಿ ಪ್ರಾರಂಭವಾಗಿರುವುದನ್ನು ಗಮನಿಸಬಹುದು. 1963ರಲ್ಲಿ ರಚಿಸಿದ **'ನಿರ್ದಯ ಬೇಸಿಗೆ'** ಕಲಾಕೃತಿ ಮೂವರು ಗಾಡಿ ಎಳೆಯುವವರು ಗಾಡಿಯನ್ನು ಎಳೆಯಲು ಹೆಣಗಾಡುತ್ತಿದ್ದಾರೆ. ಹಿನ್ನಲೆಯಲ್ಲಿ ಭಯಂಕರವಾಗಿ ಸುಡುವ ಸೂರ್ಯನ ಚಿತ್ರ. ಇದೆಲ್ಲವನ್ನು ಹೆಬ್ಬಾರರು ತಮ್ಮ ಕಲ್ಪನಾ ಸೃಷ್ಟಿಯಲ್ಲಿ ಅಳವಡಿಸಿದ್ದಾರೆ. ಸೂಕ್ಷ್ಮ ಸಂವೇದನಾಶೀಲರಾದ ಅವರ ಅಕ್ರೋಶವನ್ನು ಈ ಕೃತಿ ನಿರೂಪಿಸುತ್ತದೆ.



"ನಿರಾಶ್ರಿತರ" (1971), "ಬಾಂಗ್ಲಾ ದೇಶದ ಉದಯ" (1971), "ಅತ್ಯಾಚಾರ" (1972) ಈ ಕೃತಿಗಳು ದಿಕ್ಕಿಲ್ಲದ ಜನಸಮುದಾಯವನ್ನು ಘೋರ ಸಂಕಷ್ಟಗಳಿಗೆ ಗುಪಿಪಡಿಸುವುದನ್ನು ಗಮನಿಸಿ, ಅದರಲ್ಲಿ ಹೊಮ್ಮಿದ ಭಾವ ಪ್ರತಿಕ್ರಿಯೆಗಳನ್ನು ತೋರಿಸುವಂತಹ ಗಣನೀಯವಾದ ಕಲಾಕೃತಿಗಳಲ್ಲಿ ಹಲವು. ಅನುದಿನವೂ ನಡೆಯುತ್ತಿರುವ ಕ್ರೌರ್ಯದ ಸಂದರ್ಭಗಳನ್ನು ಮತ್ತು

ಮನುಷ್ಯರು, ಮನುಷ್ಯರ ಮೇಲೆ ಎಸಗುವ ಅಮಾನುಷ ಸಂದರ್ಭಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಹಿನ್ನೆಲೆಯಲ್ಲಿ ಚಿತ್ರಿಸುತ್ತಾ ಅವರು ಅನೇಕ ವರ್ಷಗಳಿಂದ ತಮ್ಮ ಸುತ್ತಲೂ ಇರುವ ಮಾನವನ ದುರಂತ ಜೀವನದ ಬಗ್ಗೆ ತಮಗಿರುವ ಅನುಕಂಪವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಈ ಕ್ರಮ ನಿರಂತರವಾಗಿ ಅವರ ಕಲಾಕೃತಿಗಳಲ್ಲಿ ಸಾಗಿದೆ.

ಈ ಸಂದರ್ಭದಲ್ಲಿ ಅವರ **"ಕಪ್ಪು ಗೋಡೆ"** (1977) ಎಂಬ ಕಲಾಕೃತಿಯಲ್ಲಿ ಬಯಲು ಜಾಗದಲ್ಲಿ ಮನುಷ್ಯರು ಮಲವಿಸರ್ಜನೆ ಮಾಡುವುದನ್ನು ಚಿತ್ರಿಸಲಾಗಿದೆ. ಈ ದೃಶ್ಯದ ಮುಖ್ಯ ಅಂಶವೆಂದರೆ ಒಬ್ಬ ಮಹಿಳೆ ತನ್ನ ಸೀರೆಯ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಿದ್ದಾರೆ. ಮುಖ ಮುಚ್ಚಿದ್ದ ಸೆರಗಿನ ರೇಖೆಯು ತೀರಾ ಮನಮುಟ್ಟುತ್ತದೆ. ಹೊರಗಿನ ತಿಳಿಕಂದು ಬಣ್ಣದ ಪ್ರದೇಶದಿಂದ ಅವಳನ್ನು ಪ್ರತ್ಯೇಕಿಸಿ ತೋರಿಸಲಾದ ಅವಳ ಕಪ್ಪು ಅಂಡಾಕಾರ ರಚನೆಯು, ನೋಡುವವರ ಕಣ್ಣಿನಿಂದ ತನ್ನನ್ನು ಮರೆಮಾಡಿಕೊಳ್ಳಲು ಪ್ರಯತ್ನಿಸಿರುವುದನ್ನು ಸೂಚಿಸುತ್ತದೆ. ಗುಡಿಸಲುಗಳು ಮತ್ತು ಅವುಗಳ ಮಧ್ಯೆ ಸ್ಥಳದಲ್ಲಿ ಕುಕ್ಕರಗಾಲಿನಲ್ಲಿ ಕುಳಿತಿರುವ ಮನುಷ್ಯರು, ವಿಷಯದ ಸ್ಪಷ್ಟ ನಿರೂಪಣೆಗೆ ನೆರವಾಗುವುದಲ್ಲದೆ ಚಿತ್ರದ ಸಮರೂಪತೆಗೆ ನೆರವಾಗುತ್ತಾರೆ. ಕ್ಷಿತಿಜದಲ್ಲಿ ಚಿತ್ರಿಸಿರುವ ಕಂದು ಆಕಾಶ ಮತ್ತು ಕಪ್ಪು ಗೋಡೆ – ಇವು ಕಪ್ಪು ಕಲೆಗಳಿಗಿರುವಂತಹ ತಿಳಿ ಕಂದು ಪ್ರದೇಶದ ಉಳಿದ ಭಾಗಕ್ಕೆ ಸಮ ಪ್ರಮಾಣವನ್ನು ಒದಗಿಸುತ್ತವೆ. ತಾಂತ್ರಿಕವಾಗಿ ಈ ಚಿತ್ರ ರಚನೆ ಮತ್ತು ವರ್ಣ ವೈಖರಿಗಳ ಸಾಧನೆ. ದಾರಿದ್ರ್ಯದಿಂದ ಉದ್ಭವಿಸುವ ಅಸಹ್ಯ ಸಂದರ್ಭಗಳ ಬಗ್ಗೆ ಅವರಲ್ಲಿ ಮೂಡಿಸಿದ ಪ್ರತಿಕ್ರಿಯೆಯನ್ನು ಈ ಚಿತ್ರವು ಬಿಂಬಿಸುತ್ತದೆ.

1970ರಲ್ಲಿ ಅವರು ರಚಿಸಿದ ವರ್ಣಚಿತ್ರ **"ವೇಶ್ಯೆ"**ಯಲ್ಲಿ ಮಹಿಳೆಯ ದುರಂತ ವಿಧಿಯ ಇನ್ನೊಂದು ಮುಖವನ್ನು ಚಿತ್ರಿಸಲಾಗಿದೆ. ಬರಿಯ ಬದುಕಿಗಾಗಿ ಮಾತ್ರವೇ ತಮ್ಮ ದೇಹವನ್ನು ಮಾರಾಟ ಮಾಡುವಂಥ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿದ ಮಹಿಳೆಯ ಜೀವನವು ನಿಜವಾಗಿಯೂ ಭಯಂಕರ. ಇಲ್ಲಿ ಹೆಬ್ಬಾರರು ಉದ್ದೇಶಪೂರ್ವಕವಾಗಿಯೇ ಮಹಿಳೆಯನ್ನು ಚೆಲುವೆಯಾಗಿ ಚಿತ್ರಿಸಿಲ್ಲ. ಈ ಚಿತ್ರ ವೀಕ್ಷಣೆಯಿಂದ ಮನಸ್ಸಿನಲ್ಲಿ ಮೂಡುವ ಭಾವನೆ ಎಂದರೆ ಕಾಮ ಅಥವಾ ಅತ್ಯಾಸೆಗಳಲ್ಲಿ ಮಾನವನಿಂದ ಮಾನವನ ಶೋಷಣೆ. ಅವಳ ಮುಖವನ್ನು ಸಂಪೂರ್ಣವಾಗಿ ಕಪ್ಪು ಬಣ್ಣದಲ್ಲಿ ಚಿತ್ರಿಸಿದ್ದು, ಮುಖದಲ್ಲಿ ಯಾವ ಭಾವನೆಗಳು ಕಾಣುವುದಿಲ್ಲ. ಈ ಕೃತಿಯ ವಿಷಯ

ದಯಾ, ದಾಕ್ಷಿಣ್ಯ ಮುಂತಾದ ಯಾವುದೇ ಭಾವನೆಗಳಿಗೆ ಅವಕಾಶವಿಲ್ಲದ ವ್ಯಾಪಾರ. ಅವಳು ನಾನಾ ಬಳೆ ತೊಟ್ಟುಕೊಂಡಿದ್ದಾಳೆ. ಇವು ಗಿರಾಕಿಗಳನ್ನು ಸೆಳೆಯಲು ಅವಳು ತೊಟ್ಟುಕೊಳ್ಳಬೇಕಾದ ಕೃತಿಮ ವೇಷ-ಭೂಷಣದ ಸಂಕೇತ. ಅವಳ ಕಪ್ಪು ಬಣ್ಣದ ದೇಹ ಮತ್ತು ಹಿನ್ನೆಲೆಯಲ್ಲಿ ಕಾಣುವ ದೇಹದ ರಕ್ತವರ್ಣ–ಇವೆರಡರ ವೈಲಕ್ಷಣ್ಯವನ್ನು ನಿರೂಪಿಸಲಾಗಿದೆ. ಬಾಲ್ಕನಿ ಮೂಲಕ ಸೂಳೆಗೇರಿಯ ವಿಶಿಷ್ಟ ಪರಿಸರವನ್ನು ಚಿತ್ರಿಸಲಾಗಿದೆ.

1975ರಲ್ಲಿ ಚಿತ್ರಿಸಿದ **"ವೈಪರೀತ"** ಎಂಬ ಕಲಾಕೃತಿಯಲ್ಲಿ ಮತ್ತೆ ದಾರಿದ್ರ್ಯದ ಉತ್ಕಟ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ನೀರು ಕೊಳವೆಯಲ್ಲಿ ಅಮಾನುಷ ಪರಿಸ್ಥಿತಿಗಳಲ್ಲಿ ಮನುಷ್ಯರು ಬದುಕುವುದನ್ನು ಚಿತ್ರಿಸಲಾಗಿದೆ. ಚಿತ್ರದಲ್ಲಿ ವಿಮಾನವು ಒಂಟಿಯಾಗಿ ಆಗಸದಲ್ಲಿ ಹಾರಾಡುತ್ತಿದೆ. ವಿಮಾನವು ಶ್ರೀಮಂತ ಸಮಾಜ ವರ್ಗವನ್ನು ಮತ್ತು ನಾಗರಿಕರ ವೈಜ್ಞಾನಿಕ ಪ್ರಗತಿಯನ್ನು ಪ್ರತಿಬಿಂಬಿಸುವುದಲ್ಲದೆ ಆ ತಾಂತ್ರಿಕ ಪ್ರಗತಿಯ ಮೂಲಕ ಸಾಮಾಜಿಕ ಅಸಮತೆಯನ್ನು ಹೋಗಲಾಡಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಪ್ರತಿಬಿಂಬಿಸಿ ಮನುಷ್ಯರು ಎಂಥ ಅಧೋಗತಿಯ ಸನ್ನಿವೇಶಗಳಲ್ಲಿ ಬದುಕುತ್ತಾರೆ ಎನ್ನುವ ದಾರುಣ ಚಿತ್ರವನ್ನು ನಿರೂಪಿಸುತ್ತದೆ.

## ರೇಖಾ ಚಿತ್ರಗಳು

ಭಾರತೀಯ ಕಲಾ ಪ್ರಪಂಚದಲ್ಲಿ ಹೆಬ್ಬಾರರ ರೇಖಾಚಿತ್ರಗಳು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅವರ ರೇಖಾಚಿತ್ರಗಳಲ್ಲಿ ಲಯ ಮತ್ತು ರೇಖೆಗಳಿಗೆ ಪ್ರಾಮುಖ್ಯತೆ ಕೊಟ್ಟಿರುವುದನ್ನು ಕಾಣಬಹುದು. ಅವರ ಕಣ್ಣು ಅತಿ ಸೂಕ್ಷ್ಮವಾದುದು. ಎಷ್ಟೇ ವೇಗದಲ್ಲಿ ಚಲಿಸುವ ರೇಖೆಗಳಿದ್ದರೂ ಅದನ್ನು ಮನಸ್ಸಿನಲ್ಲಿ ಗ್ರಹಿಸಿ, ರೇಕಾಚಿತ್ರಗಳೂ ರೇಖಾತ್ಮಕ ಮತ್ತು ಪೂರ್ಣ ಚಲನೆಯಿಂದ ಕೂಡಿರುತ್ತದೆ. ಹಾಗೂ ಶ್ರೀಮಂತಿಕೆಯ ಜೊತೆಗೆ ಚಲನ ಸತ್ವವಿದೆ. ಅನುಭವದ ಅಭಿವ್ಯಕ್ತಿಯಿಂದ ಕೂಡಿರುತ್ತದೆ.

ರೇಖೆಯು ಚುಕ್ಕೆಗಳಿಂದ ಒಂದು ಸ್ಥಳದಲ್ಲಿ ಆವೃತ್ತವಾಗಿರುತ್ತದೆ. ನಾವು ನೋಡಿದ ದೃಶ್ಯ ಅಥವಾ ಮೂಡಿದ ಕಲ್ಪನೆ ಮೂಲ ಆಕಾರವನ್ನು ತಾಳುತ್ತದೆ. ಇದು ಅನಂತರ ಒಂದು ಆಕಾರದ ಅಥವಾ ವಸ್ತುವಿನ ರೇಖಾಚಿತ್ರವಾಗುತ್ತದೆ. ಪ್ರಾರಂಭದಲ್ಲಿ ಹೆಬ್ಬಾರರು ತಾವು ಆಯ್ಕೆ ಮಾಡಿಕೊಂಡು ಚಿತ್ರಿಸುತ್ತಿದ್ದರು. ಒಂದು ಕಲಾಕೃತಿಯಲ್ಲಿ ವಸ್ತು ಅಥವಾ ಬಾಹ್ಯರೇಖೆಗಳನ್ನು ಪೆನ್ಸಿಲ್, ಪೆನ್ ಅಥವಾ ಚಾರ್‌ಕೋಲ್‌ನಲ್ಲಿ ರಚಿಸಿ, ಅನಂತರ ವರ್ಣಗಳನ್ನು



ಉಪಯೋಗಿಸುತ್ತಾರೆ. ಅವರು ಅನುಭವದಿಂದ ಪರಿಣಿತರಾಗಿ, ರೇಖೆಗಳಲ್ಲಿ ಅವರಿಗೆ ಏನು ಬೇಕೋ ಅದನ್ನು ಉಳಿಸಿಕೊಂಡು ಕ್ರಮೇಣ ಅವರದೇ ಶೈಲಿಯನ್ನು ಸಂಪಾದಿಸುತ್ತಾರೆ.

ಅವರು ಕಂಡ ದೃಶ್ಯ ಮತ್ತು ಕಲ್ಪನೆಗಳನ್ನು ಚಿತ್ರಿಸುತ್ತಿದ್ದರು. ಆದರೆ ರೇಖಾಚಿತ್ರಗಳಲ್ಲಿ ಒಮ್ಮೆ ಕೌಶಲ್ಯವನ್ನು ಸಾಧಿಸಿದ ಮೇಲೆ ರೇಖೆಗಳಲ್ಲಿರುವ ಅನೋನ್ಯ ಕ್ರಿಯೆಯ ಸೌಂದರ್ಯದ ಅನ್ವೇಷಣೆ ಹಾಗೂ ನೇರ ಮತ್ತು ವಕ್ರರೇಖೆಗಳು. ಹೊರಸೆಳೆಯುವ ಗುಣವನ್ನು ತಿಳಿಯಲು ಪ್ರಾರಂಭಿಸಿದರು. ಲಯಬದ್ಧವಾದ ಚಲನೆಯಿಂದ ಕೂಡಿದ ರೇಖೆಗಲು ಅವರನ್ನು ಪ್ರೇರೇಪಿಸಿ ಹೆಚ್ಚು ಹೆಚ್ಚು ಅದರಲ್ಲಿ ತೊಡಗುವಂತೆ ಮಾಡಿತು. ರೇಖೆಗಳು ಹಾಡುವ ಮತ್ತು ನೃತ್ಯದ ಗುಣವನ್ನು ಹೊಂದಿದ್ದು, ಅನುಕರಣೆಗಿಂತ ಹೆಚ್ಚು ಸೃಜನಾತ್ಮಕವಾಗಿರುತ್ತದೆ. ಅಲ್ಲದೆ, ಮಿತವಾದ ರೇಖೆಗಳಿಂದ ಪರಿಣಾಮಕಾರಿಯಾದ ಕಲಾಭಿವ್ಯಕ್ತಿಯೇ ಹೆಬ್ಬಾರರ ರೇಖಾಚಿತ್ರಗಳ ವಿಶೇಷತೆ.

ಅನಂತರ ಭಾರತೀಯ ಶಿಲ್ಪ ಮತ್ತು ಪ್ರಾಚೀನ ಸ್ಮಾರಕಗಳನ್ನು ರೇಖಾಚಿತ್ರಗಳ ಮೂಲಕ ರಚಿಸಲು ಪ್ರಾರಂಭಿಸಿದರು. ಈ ರೇಖಾಚಿತ್ರಗಳಲ್ಲಿ ವಿವರಗಳನ್ನು ತ್ಯಜಿಸಿ, ಚಿತ್ರದೊಡನೆ ಲಯಬದ್ಧವಾದ ಗುಣದೊಡನೆ ರಚಿಸಿದ್ದಾರೆ. ಇವುಗಳಲ್ಲಿ ಲಯಕ್ಕೆ ಹೆಚ್ಚು ಪ್ರಾಧಾನ್ಯಕೊಟ್ಟು ಆಕಾರಗಳನ್ನು ಸರಳಗೊಳಿಸಿದ್ದಾರೆ ಹಾಗೂ ಕೆಲವು ಭಾಗಗಳನ್ನು ಅತಿಯಾಗಿ ಅಥವಾ ವಿರೂಪಗೊಳಿಸಿರುವುದನ್ನು ಕಾಣಬಹುದು. ಅವರು ಕನಿಷ್ಠವಾದ ರೇಖೆಗಳಿಂದ ಪರಿಣಾಮವನ್ನು ತರಲು ಪ್ರಯತ್ನಿಸಿ ಇದರಿಂದ ತಮ್ಮತನವನ್ನು ಕಂಡುಕೊಂಡಿದ್ದಾರೆ.

ಭಾರತೀಯ ಸಂಪ್ರದಾಯ ನೃತ್ಯ ವೀಕ್ಷಿಸುತ್ತಿದ್ದಾಗ, ನೃತ್ಯಗಾತಿಯ ಶರೀರದ ಅಂಗಾಂಗಳ ಸುಂದರ ಹಾಗೂ ಸಂಯಮ ಚಲನೆ ಹೆಬ್ಬಾರರನ್ನು ಆಕರ್ಷಿಸಿತು. ಇದನ್ನು ತಮ್ಮ ರೇಖೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಅಲ್ಲದೇ, ಸಂಗೀತದಿಂದ ಪ್ರಭಾವಿತರಾದ ಹೆಬ್ಬಾರರು ತಮ್ಮ ಭಾವನೆಗಳನ್ನು ಚುರುಕಾಗಿ ಅಭಿವ್ಯಕ್ತಗೊಳಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಈ ಪ್ರಕ್ರಿಯೆಯಿಂದ ವಸ್ತುವಿನ ರೇಖೆಗಳಲ್ಲಿ ಚಲನಾಶಕ್ತಿ ಎದ್ದು ಕಾಣುತ್ತದೆ. ಪ್ರಕೃತಿ ಚಿತ್ರ ಮತ್ತು ಸಮುದ್ರ ಚಿತ್ರಗಳನ್ನು ರಚಿಸುವಾಗಲೂ, ಸಂಯಮದಿಂದ ರೇಖೆಗಳು ಮೂಡಿರುವುದನ್ನು ಅವರ ಕಲಾಕೃತಿಗಳಲ್ಲಿ ಗಮನಿಸಬಹುದು. ಇದರಿಂದ ಮನುಷ್ಯನ ಮನಸ್ಸು ಸೃಜಶೀಲತೆಯನ್ನು ಅಭಿವ್ಯಕ್ತಗೊಳಿಸುವಲ್ಲಿ ಎಷ್ಟು ಶಕ್ತವಾಗಿದೆ ಎಂಬುದನ್ನು ಅರಿಯಬಹುದು.

## ಸುಖಮಯ ಸಂಸಾರ



ಅವರ ಮನೆ ಕಲಾವಿದರಿಂದ ಕೂಡಿದ್ದು, ಎಲ್ಲವೂ ಕಲಾತ್ಮಕ-ವಾಗಿರುತ್ತದೆ. ಪತಿಯ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದ ಪತ್ನಿ. ಇವರಿಗೆ ಮೂರು ಜನ ಮಕ್ಕಳು. ಹಿರಿಯ ಮಗಳು ರೇಖಾರಾವ್ ಚಿತ್ರಕಲಾವಿದೆ. ತನ್ನದೇ ಆದ ಸ್ವತಂತ್ರ ದಾರಿಯಲ್ಲಿ ಕಲಾಕೃತಿಗಳನ್ನು ರಚಿಸಿ, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಕಿರಿಯ ಮಗಳು ರಜನಿ ಪ್ರಸನ್ನ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾ ಇತಿಹಾಸವನ್ನು ಬೋಧಿಸಿ, ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮಗ ರನ್ನ ಹೆಬ್ಬಾರ್ ಒಳ್ಳೆಯ ಛಾಯಾಗ್ರಹಕ.

## ವಿಚಾರಗಳು : ಅಭಿಪ್ರಾಯಗಳು

ಹೆಬ್ಬಾರರು ಕಲೆ, ಕಲಾಶಿಕ್ಷಣದ ಬಗ್ಗೆ ಕೆಲವು ಲೇಖನಗಳನ್ನು, ಭಾಷಣಗಳನ್ನು ಮಾಡಿದ್ದಾರೆ. ಅವರು ವ್ಯಕ್ತಪಡಿಸಿದ್ದ ಕೆಲವು ಮುಖ್ಯ ವಿಚಾರಗಳು ಕೆಳಕಂಡಂತಿವೆ.

ನಾನು ಅಸ್ತಿತ್ವದಲ್ಲಿರುವ ಕಲಾರಂಗವನ್ನು ಸಕ್ರಿಯ ಭಾಗಿಯಾಗಿ ಅವಲೋಕಿಸುತ್ತಿದ್ದೇನೆ. 40ರ ಮತ್ತು 50ರ ದಶಕದಲ್ಲಿ, ಅದುವರೆಗಾಗಲೀ, ಕಲೆಯ ಒಂದು ಪರಿಕಲ್ಪನೆಯನ್ನು ಮೂಲಭೂತವಾಗಿ ಬದಲಾಯಿಸಿದ ಪಶ್ಚಿಮದಲ್ಲಿನ ಸಮಕಾಲೀನ ಕಲಾ ಚಟುವಟಿಕೆಗಳಿಂದಾಗಿ ದಿಗ್ಭ್ರಮೆಗೊಂಡದ್ದುಂಟು. ಪಾರಂಪರಿಕ ಮೌಲ್ಯಗಳು ಸಂಪೂರ್ಣವಾಗಿ ಅಳಿದು ಹೋಗಿದ್ದುವು. ಕಲೆಯ ರೂಪಾತ್ಮಕ ಅಂಶಗಳಿಗೆ ಒತ್ತನ್ನು ನೀಡುವ ವ್ಯಕ್ತಿ ನಿಷ್ಠ ಅಭಿವ್ಯಕ್ತಿ ವಿಧಾನವು ರೂಪುಗೊಂಡಿತು. ನಾವು ಭಾರತದಲ್ಲಿ ಅಂತರ್ರಾಷ್ಟ್ರೀಯ ಕಲಾರಂಗದ ಸರಿಜೋಡಿಯಾಗಲು ಉತ್ಸಾಹದಿಂದ ರೂಪಾತ್ಮಕ ಅಂಶಗಳನ್ನು ಅಣುಕವೆನ್ನುವಷ್ಟು ಅನುಕರಿಸಿದವು.



ನಮ್ಮದು ಅತ್ಯಂತ ಪ್ರಾಚೀನ ನಾಗರೀಕತೆಗಳಲ್ಲಿ ಒಂದಾಗಿದ್ದು, ಆಯಾ ಕಾಲದಲ್ಲಿ ಅದರ ಪರಕಾಷ್ಠತೆಯನ್ನು ಮುಟ್ಟಿದ್ದೇವೆ. ನಮ್ಮ ನರನಾಡಿನಲ್ಲಿ ಹರಿಯುತ್ತಿರುವ ಶ್ರೀಮಂತ ಪ್ರಾಚೀನ ರಕ್ತವೂ ನಮ್ಮ ಕಲಾವಿದರನ್ನು ಮತ್ತೊಮ್ಮೆ ಪ್ರೇರೇಪಿಸಿದೆ ಹಾಗೂ ನಾವು ರೂಪಾತ್ಮಕ ಅಂಶಗಳ ಮೇಲೆ ನಿಪುಣತೆಯನ್ನು ಸಾಧಿಸುವುದರ ಜೊತೆಗೆ, ನಮ್ಮ ಸೃಜನಶೀಲ ಪ್ರಯತ್ನಗಳಿಗೆ ತಾಳಿಕ ಗುಣಗಳನ್ನು ತುಂಬುವ ಸಲುವಾಗಿ ಸಂಪರ್ಕಾತ್ಮಕ ಅಂಶಗಳನ್ನು ಬಲಗೊಳ್ಳುವಂತೆ ಮಾಡಬೇಕಾದುದನ್ನು ನಾನು ನಿಧಾನವಾಗಿ ಮನವರಿಕೆ ಮಾಡಿಕೊಡಲು ಆರಂಭಿಸಿದ್ದೇನೆ.

ಇಂದು ನಮ್ಮಲ್ಲಿ ಕಲಾವಿದರು ನಿರಂತರವಾಗಿ ಬದಲಾವಣೆ ಹೊಂದುತ್ತಿರುವ ಈ ಜಗತ್ತಿನಲ್ಲಿ, ಚಿಂತನೆಯಿಂದ ಶಾಶ್ವತ ಮೌಲ್ಯಗಳನ್ನು ಗ್ರಹಿಸುವುದು ತಂತ್ರದಲ್ಲಿ ಪರಿಮಿತಿಯನ್ನು ಸಾಧಿಸುವಷ್ಟೇ ಮುಖ್ಯವಾದುದೆಂಬುದನ್ನು ಮನದಟ್ಟು ಮಾಡಿಕೊಂಡಿದ್ದಾರೆ. ಆಧುನಿಕ ಕಲಾವಿದನ ಅನುಭವ ವ್ಯಾಪ್ತಿಯು ಹೊರಜಗತ್ತಿಗಷ್ಟೇ ಸೀಮಿತವಾಗಿಲ್ಲ. ನಮ್ಮ ಶಿಕ್ಷಿತ ಪ್ರೇಕ್ಷಕರು ಕೂಡ ಈಗಲೂ ಕಲೆಯನ್ನು ವಿಲಾಸವೆಂದು ಮತ್ತು ಮಾನವ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಲ್ಲವೆಂದು ತಿಳಿದಿರುವಾಗ ಕಲಾವಿದನು ಅಂತರದೃಷ್ಟಿಗೆ ಪ್ರಾಮಾಣಿಕ ಮತ್ತು ತಕ್ಕ ತಿಳುವಳಿಕೆಯುಳ್ಳ ಪ್ರೇಕ್ಷಕನಿಂದಾಗಿ ಅನುಭವ ಸಿಗುವಂತೆ ಮಾಡುವುದು. ಇಂದು ಕಲಾವಿದನು ಎದುರಿಸುತ್ತಿರುವ ಒಂದು ಬಿಡಿಸಲಾಗದ ಸಮಸ್ಯೆಯಾಗಿದೆ. ಸ್ವಲ್ಪ ಮಟ್ಟಿಗೆ ಇಂದಿನ ಕಲಾವಿದ ತನ್ನ ಪ್ರೇಕ್ಷಕರ ಬಗೆಗೆ ಯಾವುದೇ ಸಹಾನುಭೂತಿ ಇಲ್ಲದಿರುವುದಕ್ಕೆ ತಾನೂ ಹೊಣೆಗಾರನಾಗಿದ್ದಾನೆ. ಅದೇ ಸಮಯದಲ್ಲಿ, ಕಲಾವಿದನ ವಾಸ್ತವತೆಯ ವೈಶಿಷ್ಟ್ಯಪೂರ್ಣ ದೃಷ್ಟಿಕೋನವನ್ನು ಪ್ರೇಕ್ಷಕರು ತಾವೇ ಅನುಭವಿಸಬೇಕೇ ಹೊರತು ಅವರಿಗೆ ವಿವರಿಸಬಾರದು ಎಂಬುದು ಸತ್ಯ. ಇದಕ್ಕಾಗಿ ಪ್ರೇಕ್ಷಕರನ್ನು ಶಿಕ್ಷಿತರನ್ನಾಗಿ ಮಾಡಬೇಕು ಮತ್ತು ಅವರಲ್ಲಿ ತಿಳುವಳಿಕೆ ಮೂಡಿಸಬೇಕು.

ಒಂದು ಕಲಾಕೃತಿ ಚಿಂತನೆ ಮಾಡುವಷ್ಟು ಯೋಗ್ಯವಾಗಿದ್ದರೆ ಅದು ಮಾನವನ ಕುಲವನ್ನು ಉನ್ನತಗೊಳಿಸಲು ಶಕ್ತವಾಗುತ್ತದೆ. ಇಂದಿನ ಭಾರತೀಯ ಕಲಾವಿದರು ಮುಂದಿನ ವರ್ಷಗಳಲ್ಲಿ, ತಮ್ಮ ಹಿಂದಿನವರಿಗಿಂತ ಪ್ರತಿಭೆ ಮತ್ತು ಅಭಿವ್ಯಕ್ತಿ ಗುಣಗಳಲ್ಲಿ ಮತ್ತಷ್ಟು ಶ್ರೀಮಂತವಾದ ತಮ್ಮದೇ ಆದ ಪರಂಪರೆಯನ್ನು ನಿರ್ಮಿಸುತ್ತೇವೆಂಬ ಭರವಸೆಯನ್ನು ಹೊಂದಿದ್ದಾರೆ.

## ಸಮಕಾಲೀನ ಕಲೆ

ಇದು ಮನುಷ್ಯನ ಪ್ರವೃತ್ತಿ ಮತ್ತು ಸುತ್ತಮುತ್ತಲಿನ ಜನಜೀವನದಿಂದ ಬದಲಾಗುತ್ತಾ ಹೋಗುತ್ತದೆ. ಕಲಾವಿದ ತನ್ನ ಪರಿಸರಕ್ಕೆ ಸ್ಪಂದಿಸುತ್ತಾನೆ. ಹಿಂದಿನ ಕಾಲದ ಕಲೆಯಲ್ಲಿ ಹೆಚ್ಚಾಗಿ ಪ್ರಕೃತಿಯ ಅಥವಾ ಜನಜೀವನದ ಬಾಹ್ಯ ರೂಪವನ್ನು ಹೆಚ್ಚಾಗಿ ಚಿತ್ರಿಸುತ್ತಿದ್ದರು. ಈಗ ಸಮಕಾಲೀನ ಕಲೆಯಲ್ಲಿ ಬಾಹ್ಯ ರೂಪಕ್ಕೆ ಅಷ್ಟೊಂದು ಮಹತ್ವವನ್ನು ಕೊಡುವುದಿಲ್ಲ. ಬಾಹ್ಯ ರೂಪವನ್ನು ತೋರಿಸುವುದಕ್ಕೆ ಕ್ಯಾಮರಾ ಇದೆ. ಅದಕ್ಕಿಂತ ಹೆಚ್ಚಿನ ಪರಿಣಾಮಕಾರಿಯಾಗಿ ತೋರಿಸುವುದನ್ನು ಈ ಕಾಲದ ಕಲಾವಿದ ಪ್ರಯತ್ನಿಸುತ್ತಾನೆ.

ಕಲಾವಿದನಾಗಲೀ ಬೇರೆ ಯಾರೇ ಆಗಲೀ, ಅವನು ಒಂದು ಸಮಾಜದಲ್ಲಿ ಬೆಳೆಯಬೇಕು. ಕಲಾವಿದನು ಯಾವ ಸಮಾಜದಲ್ಲಿ ಬೆಳೆಯುತ್ತಾನೋ ಆ ಸಮಾಜದಿಂದ ಆತ ಸಾಕಷ್ಟು ಪ್ರಭಾವಿತನಾಗಿರುತ್ತಾನೆ ಹಾಗೂ ತನ್ನ ಕೃತಿಯ ಮೂಲಕ ಅದನನು ವ್ಯಕ್ತಪಡಿಸುತ್ತಾನೆ. ಕಲಾವಿದನ ವಿಚಾರಾತ್ಮಕ ದೃಷ್ಟಿ ಎಷ್ಟೋ ಬೆಳೆಯುತ್ತದೋ, ಅಷ್ಟೇ ಗಾಢವಾದ ಚಿತ್ರ ರಚಿಸುತ್ತಾನೆ.

## ಕಲೆ ಮತ್ತು ಸಮಾಜ

ಮಾನವ ಮಣ್ಣಿನ ಪಾತ್ರೆಗಳನ್ನು ಎಂದು ಮಾಡಿದನೋ ಅಂದಿನಿಂದ ಕಲೆ ಹುಟ್ಟಿತು. ಅವನು ಒಂದು ಪಾತ್ರೆಯನ್ನು ಮಾಡಿದ. ಅವನಲ್ಲಿ ಕಲಾವಂತಿಕೆ ಇರುವುದನ್ನು ಜನರು ತಿಳಿದುಕೊಂಡು, ಅವನನ್ನು ಅಲಂಕಾರಿಗೊಂಡ ಮಣ್ಣಿನ ಪಾತ್ರೆ ಉಪಯೋಗಕ್ಕೆ ಮಾತ್ರವಲ್ಲದೆ ನೋಡಲು ಸುಂದರವಾಗಿ ಕಾಣತೊಡಗಿತು. ಈ ಸೌಂದರ್ಯದ ಅನುರಾಗ ಈತನನ್ನು ಭೂಮಿಯ ಬಣ್ಣಗಳ ಅನ್ವೇಷಣೆಗೆ ಹಚ್ಚಿತು. ಇದರಿಂದ ಈತ ತನ್ನ ಉಪಯೋಗದ ವಸ್ತು, ತನ್ನ ವಾಸದ ಮನೆ ಮತ್ತು ತನ್ನ ಸ್ವಂತ ಜನರನ್ನು ಅಲಂಕರಿಸತೊಡಗಿದ. ಸೌಂದರ್ಯದ ಅನ್ವೇಷಣೆಯಿಂದಾಗಿ ಸಹಜವಾಗಿ ಈತ ತನ್ನನ್ನು ಸುತ್ತುವರಿದಿದ್ದ ಪ್ರಾಣಿ ಜಗತ್ತಿನಿಂದ ಮೇಲೇರಿ ಬಂದ.

ಜಿಂಕೆಯು ಸೌಂದರ್ಯ, ಕಾಡೆಮ್ಮೆಯು ಶಕ್ತಿ, ಸಿಂಹದ ಗಾಂಭೀರ್ಯವನು ಈಗ ಸಾಧಾರಣ ಬಣ್ಣಗಳಲ್ಲಿ ಶಕ್ತಿಯುತವಾದ ಗೆರೆಗಳ ಮೂಲಕ ಅಭಿವ್ಯಕ್ತಿಸಿದ. ಸಮಾಜದ ಜವಾಬ್ದಾರಿಯನ್ನು ತನ್ನದೇ ಆದ ರೀತಿಯಲ್ಲಿ ಗೌರವಿಸುತ್ತಿದ್ದ. ಅಲ್ಲಿಂದ ಮುಂತಲ ಏತನ ಸೌಂದರ್ಯಪ್ರಜ್ಞೆ ಮತ್ತು ಅದರ ಅಭಿವ್ಯಕ್ತಿಗಳು ಬೆಳೆದಂತೆ, ನಾಗರಿಕ ಮಾನವನಾಗಿ ಬದಲಾಯಿಸಿದ. ಪ್ರಕೃತಿಯ ಚಮತ್ಕಾರ ಮತ್ತು ಗೂಢ ಪ್ರಶ್ನೆಗಳಿಂದ ಹುಟ್ಟು ಮತ್ತು ಸಾವು. ಇದರಿಂದ ಜನ್ಮತಾಳಿದ ಧರ್ಮದ ರಚನೆ ಕುರಿತು ಈತನ ಪ್ರಜ್ಞೆ ವಿಸ್ಮಯಗೊಂಡಿತು.

## ಆಧುನಿಕ ಕಲೆ

ಈ ಶತಮಾನದಲ್ಲಿ ಯುರೋಪಿನಲ್ಲಿ ಮಂಬೆಳಕನ್ನು ಕಂಡ ಕಲೆ ಹೊಸ ಚಳವಳಿ ನಮ್ಮ ದೇಶಕ್ಕೆ ತಡವಾಗಿ ಬಂದಿತು. ಹೊಸ ಹೊಸ ಪದ್ಧತಿಯನ್ನು ಪಾಶ್ಚಿಮಾತ್ಯರು ಮೊದಲು ಆಚರಣೆಗೆ ತಂದಿದ್ದರಿಂದ ನಮ್ಮ



ಕಲಾವಿದರಿಗೆ ಅದು ಎರಡನೆ ದರ್ಜೆಯ ಅನುಭವವಾಯಿತು. ಪೂರ್ವ ಮತ್ತು ಪಶ್ಚಿಮಗಳ ರಕ್ತಸಂಬಂಧದಿಂದ ಜನಿಸಿ, ಯುರೋಪಿನಲ್ಲಿ ಕಲಾಶಿಕ್ಷಣ ಪಡೆದ ಅಮೃತ ಶೇರ್‌ಗಿಲ್ 1930ರಲ್ಲಿ ಭಾರತದ ಕಲಾದಿಗಂತದಲ್ಲಿ ಕ್ರಾಂತಿಕಾರಿಯಾಗಿ ಪ್ರವೇಶಿಸಿದಳು. ಆಕೆಯಲ್ಲಿ ಸಮೃದ್ದವಾಗಿ ಬೆಳೆದ ಸೃಜನಾತ್ಮಕತೆಯ ಆಕರ್ಷಕ ಸಮೃದ್ಧವಾಗಿ ಬೆಳೆದ ಸೃಜನಾಕತೆಯ ಆಕರ್ಷಕ ರೂಪ ಈ ತಲೆಮಾರಿನ ಕಲಾವಿದರಿಗೆ ಹಿಂದಿನ ಅನುಕರಣೆಗಿಂತ ಪ್ರಸ್ತುತದಲ್ಲಿ ಬದುಕುವುದು ಮತ್ತು ಭವಿಷ್ಯವನ್ನು ನೋಡುವುದರ ಕಡೆಗೆ ಉತ್ತೇಜನ ನೀಡಿತು. ಈ ಕಾಲದ ಶ್ರೇಷ್ಠ ಕವಿ ರವೀಂದ್ರನಾಥಠಾಗೂರ್ ಒಬ್ಬನ ಭಾವನೆಗಳಿಂದ ಕಲಾಕೃತಿ ಹೊರಬರಬೇಕಲ್ಲದೆ ವರ್ಷಗಟ್ಟಲೆ ಕಲಾ ಶಾಲೆಯಲ್ಲಿ ತರಬೇತಿ ಪಡೆದ ವಸ್ತುವಾಗುವುದಿಲ್ಲವೆಂದು ಸಾಧಿಸಿ ತೋರಿಸಿದರು. ಲಯ ಮತ್ತ ಬಣ್ಣಗಳ ಆಳವಾದ ಡ್ಞಾನದಿಂದ ಹೃದಯ ಮತ್ತು ಬುದ್ಧಿಗಳಿಗೆ ತಟ್ಟುವಂತಹ ಕಲಾಕೃತಿಯನ್ನು ಅವರು ವೃದ್ಧಾಪ್ಯದಿಂದ ಪಕ್ವವಾಗಿದ್ದ ಕಾಲದಲ್ಲಿ ನಿರ್ಮಿಸಿದರು. ನಿರಂತರ ಮತ್ತು ಪ್ರತಿಭಾನ್ವಿತರಾದ ನಮ್ಮ ಕಲಾವಿದರು ಸ್ವಾತಂತ್ರ್ಯ ನಂತರದಲ್ಲಿ ಮಾತ್ರ ವಿಶಾಲವಾದ ಸಮಕಾಲೀನ ಕಲೆಯಲ್ಲಿ ತಮ್ಮ ಸ್ವಂತಿಕೆಯನ್ನು ಸ್ಥಾಪಿಸಲು ಪೂರ್ಣವಾದ ಅವಕಾಶ ದೊರೆಯಿತು.

ಭಾರತದ ಸಮಕಾಲೀನ ನವ್ಯಕಲೆಯನ್ನು ಕುರಿತು ಮಾತನಾಡುವಾಗ ದೇಶದ ಹೊರಗೆ ಕಂಡುಹಿಡಿದ ವಿವಿಧ ಇಸಂಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತೇವೆ. ನಮ್ಮ ದೇಶ ಕೂಡ ಕೆಲವು ಹೊಸ ಕಲಾರೂಪಗಳಿಗೆ ತೊಟ್ಟಿಲಾಗಿರುವುದನ್ನು ನಾವು ಮರೆತ್ತಿದ್ದೇವೆ. ಉದಾಹರಣೆಗೆ ವಾಸ್ತುಶಿಲ್ಪದಲ್ಲಿನ ನರಸಿಂಹ ಅಥವಾ ದುರ್ಗೆಯ ನಿರೂಪಣೆ. ಹಿಂದಿನ ಕಾಲದಲ್ಲಿ ಮನುಷ್ಯನನ್ನು ಮೀರಿದ ಅದ್ಭುತ ವ್ಯಕ್ತಿಯನ್ನು ಸೃಷ್ಟಿಸುತ್ತಿದ್ದರು. ಪ್ರಚಂಡವಾದ ಹಿರಣ್ಯಕಶಿಪುವನ್ನು ಕೊಲ್ಲಲು ಅರ್ಧ ಮನುಷ್ಯ. ಅರ್ಧ ಸಿಂಹಾಕೃತಿಯನ್ನು ನರಸಿಂಹ. ನಂತರ ದುಷ್ಟ ಮಹಿಷಾಸುರನ ಸಂಹಾರಕ್ಕಾಗಿ ಅತ್ಯಂತ ಶಕ್ತಿದಾಯಕವಾದ ಹದಿನಾರು ಕೈಗಳ ಭಯಂಕರ ಸ್ತ್ರೀ ದುರ್ಗ.

ಪ್ರಯೋಗ ಸಿದ್ಧವಲ್ಲದ ಕಲೆ ಸಂಪೂರ್ಣವಾಗಿ ಭಾರತದ ಕಲೆಗೆ ಸಾಹಿತ್ಯ ಮತ್ತು ವೇಂದಾಂತದ ಆಲೋಚನೆಗಳೊಡನೆ ಹೊಂದಿಕೊಂಡಿಲ್ಲ. ನಮ್ಮ ಧಾರ್ಮಿಕ ಕಲೆ ಸಂಪೂರ್ಣ ಸಂಕೇತಗಳಿಂದ ಕೂಡಿದ್ದರೂ ರೇಖಾ ಚಿತ್ರದ ಶ್ರೇಷ್ಠರೂಪಗಳಿಂದ ಹೊರತಾಗೇನಿಲ್ಲ. ನಮ್ಮ ಹಳ್ಳಿಗರು ತಮ್ಮ ವಾಸದ ಮನೆಗಳ ಮಣ್ಣಿನ ಗೋಡೆಗಳನ್ನು ಚಿತ್ರವಿಚಿತ್ರವಾದ ಆಕೃತಿ ಮತ್ತು ಬಣ್ಣಗಳಿಂದ ಸಂಪೂರ್ಣವಾದ ಸಾಂಕೇತಿಕ ಮಹತ್ವ ಮತ್ತು ಅಲಂಕಾರದಿಂದ

ಸಿಂಗರಿಸಿರುತ್ತಾರೆ. ಬುಡಕಟ್ಟು ಜನಾಂಗದವರಿಗೆ ಕಲೆ ಅವರ ಜೀವನದ ಅವಶ್ಯಕ ಭಾಗವಾಗಿದೆ. ಪಾಶ್ಚಾತ್ಯ ವನ್ಯ ಚಿತ್ರಕಾರರೂ ಹಿಂದೂ ತತ್ವ ದರ್ಶನದಿಂದ ಸ್ಫೂರ್ತಿಗೊಂಡಿದ್ದಾರೆ.

ಕಲಾವಿದ ಭಾರತೀಯನಾಗಬೇಕಾದರೆ ನಿಜವಾದ ತನ್ನ ವಿಚಾರ ಮತ್ತು ಕೃತಿಯಲ್ಲಿ ಭಾರತೀಯನಾಗಿರಬೇಕು. ಭಾರತದ ಸಾವಿರಾರು ವರ್ಷಗಳ ನಾಗರಿಕತೆಯ ಬಗ್ಗೆ ಆಳವಾದ ಆಲೋಚನೆ ಅವನಲ್ಲಿದ್ದರೆ, ಅವನ ಸೃಷ್ಟಿಯಲ್ಲಿ ದೇಶೀಯ ಅಭಿರುಚಿ ಕೊನೆಯವರೆಗೂ ಇರುತ್ತದೆ. ನಮ್ಮ ಕಲಾವಿದರು ಈಗಾಗಲೇ ತಮ್ಮ ಕೊಡುಗೆಯ ಮಹತ್ವವನ್ನು ಸಾಧಿಸಿ ತೋರಿಸಿದ್ದಾರೆ.

## ಭಾರತೀಯ ಕಲೆಗೆ ಕರ್ನಾಟಕ ಕೊಡುಗೆ

ಕರ್ನಾಟಕದಲ್ಲಿರುವ ವಾಸ್ತು, ಶಿಲ್ಪ ಮತ್ತು ಚಿತ್ರಕಲೆ ಹಾಗೂ ಪರಂಪರಾಗತವಾಗಿ ಬಂದ ಜಾನಪದ ಕಲೆ ಕಲಾವೈಭವ ಒಂದು ಪ್ರಧಾನ ಭಾಗವಾಗಿದೆ. ಕರ್ನಾಟಕದಲ್ಲಿ ಪ್ರಾಮುಖ್ಯವಾಗಿ ಕಂಡುಬರುವ ಕಲಾಕೃತಿಗಳು ಕ್ರಿ.ಶ. ಸುಮಾರು ಎರಡನೇ ಶತಮಾನದಿಂದ ಕ್ರಿ.ಶ. ಏಳನೇ ಶತಮಾನದವರೆಗಿನ ದೀರ್ಘಾವಧಿಯಲ್ಲಿ ರಚಿಸಲ್ಪಟ್ಟ ಅಜಂತದ ಭಿತ್ತಿಚಿತ್ರಗಳಂತೂ ಕಲಾವಿದ, ಕಲಾವಿಮರ್ಶಕ ಹಾಗೂ ರಸಿಕ ಜನರನ್ನು ಮುಗ್ಧಗೊಳಿಸಿದೆ. ಈ ಭಿತ್ತಿ ಚಿತ್ರಗಳನ್ನು ರಚಿಸಿದ ಕಲಾವಿದರಲ್ಲಿ ಕನ್ನಡಿಗರು ಇದ್ದಿರಬೇಕೆಂಬುದು ತಜ್ಞರ ಅಭಿಪ್ರಾಯ.

ಆರನೇ ಶತಮಾನದಲ್ಲಿ ಚಾಲುಕ್ಯರ ಆಡಳಿತದಲ್ಲಿ ಕಲೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಆ ಕಲಾವಿದರು ವಾಸ್ತುಶಿಲ್ಪಿಯ ಭಿತ್ತಿಚಿತ್ರಗಳನ್ನು ಸ್ವತಂತ್ರ ಶೈಲಿಯಿಂದ ನಿರ್ಮಿಸಿದರು. ಚಾಲುಕ್ಯರ ಸೃಜನಾತ್ಮಕ ಕಲಾಕೃತಿಗಳನ್ನು ಇಂದಿಗೂ ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಯಲ್ಲಿ ಕಾಣಬಹುದು. ಈ ಕನ್ನಡ ಕಲಾವಿದರ ಕೊಡುಗೆ ಭಾರತೀಯ ಕಲೆಗೆ ಅಪಾರ. ಅನಂತರ ಹತ್ತನೆಯ ಶತಮಾನದಲ್ಲಿ ದೊರೆ ಚಾವುಂಡರಾಯನ ಪ್ರೋತ್ಸಾಹದಿಂದ ಶ್ರವಣಬೆಳಗೊಳದಲ್ಲಿ ಬಾಹುಬಲಿಯ ಪ್ರತಿಮೆ ಭಾರತ ಕಲಾಸಂಪತ್ತಿಗೆ ಕರ್ನಾಟಕದ ಒಂದು ಮಹತ್ವಪೂರ್ಣ ಕೊಡುಗೆ.

ಸುಮಾರು ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ತಾಡವಾಲೆ ಚಿತ್ರಗಳನ್ನು ದಕ್ಷಿಣ ಕನ್ನಡದ ಮೂಡುಬಿದರೆಯ ಜೈನ ಸಂಗ್ರಹಾಲಯದಲ್ಲಿ ಕಾಣಬಹುದು. ಈ ಕಲಾವಿದರು ಸೃಜನಾತ್ಮಕವಾಗಿ ರಚಿಸಿದ್ದ ಕೃತಿಗಳು ಮುಂದಿನ ಭಾರತೀಯ ಚಿಕಣಿ ಚಿತ್ರಗಳಿಗೆ ಮೂಲಾಧಾರವೆನ್ನಬಹುದು.

ಇದೇ ಶೈಲಿಯಲ್ಲಿ ಬರೆದ ಭಿತ್ತಿಚಿತ್ರಗಳನನ್ನು ಶ್ರವಣಬೆಳಗೊಳದಲ್ಲಿ ಇಂದಿಗೂ ಕಾಣಬಹುದು. ಹನ್ನೆರಡು, ಹದಿಮೂರನೇ ಶತಮಾನದಲ್ಲಿ ಹೊಯಿಸಳ ಆಶ್ರಯದಲ್ಲಿ ರಚಿಸಲ್ಪಟ್ಟ ಬೇಲೂರು, ಹಳೇಬೀಡು ವಾಸ್ತುಶಿಲ್ಪ ಕೃತಿಗಳು ತಮ್ಮ ಹಿಂದಿನ ಭವ್ಯತೆಯನ್ನು ಕಳೆದುಕೊಂಡರೂ, ಅಲಂಕರಣ ಹಾಗೂ ಅತಿ ಸೂಕ್ಷ್ಮ ಕೆತ್ತನೆಯ ಕೆಲಸಕ್ಕಾಗಿ ಪ್ರಖ್ಯಾತಿಗೊಂಡಿವೆ.

ಕರ್ನಾಟಕದ ಜಾನಪದ ಕಲೆಗಳ ಕೊಡುಗೆಯೂ ಅಪಾರವಾದುದು. ಇಂದಿಗೂ ಅಳಿದುಳಿದಿರುವ ತೊಗಲು ಗೊಂಬೆಗಳ ಸೃಜನಶೀಲತೆ, ವರ್ಣ ವೈಖರಿ, ಆಧುನಿಕ ಕಲಾವಿದರನ್ನು ಬೆರಗುಗೊಳಿಸುವಂತಹದು. ಹಾಗೆಯೇ ನಾಗರಿಕತೆಯಿಂದ ದೂರವಿದ್ದ ಕರ್ನಾಟಕದ ಆದಿವಾಸಿ ಜನರು ರಚಿಸಿದ್ದ ಮೂರ್ತಿಗಳು, ಮುಖವಾಡಗಳು, ಇವುಗಳಲ್ಲಿ ಆ ಜನರ ಮುಗ್ಧಭಾವ ನೇರ ಚಿತ್ರಣದ ವೈಖರಿ ಹಾಗೂ ಭಾವಪ್ರಾಧಾನ್ಯ ಎದ್ದು ಕಾಣುತ್ತದೆ. ಈ ಮುಗ್ಧ ಕಲಾವಿದರ ಕೃತಿಗಳು ಒರಟು, ಭೀಕರ ಎಂದು ಅನಿಸಬಹುದು. ಆದರೆ ಇವುಗಳಲ್ಲಿಯ ಸೃಜನಶೀಲತೆಯು ಆಧುನಿಕ ಕಲಾವಿದನಿಗೆ ಪ್ರೇರಣೆಯನ್ನೀಯುವಂತಿದೆ.

ಮನೆಯ ಮುಂಭಾಗದಲ್ಲಿ ಮಹಿಳೆಯರು ರಂಗವಲ್ಲಿಯನ್ನು ರಚಿಸುವುದು ಬಹು ಪುರಾತನ ಪದ್ಧತಿ. ಇವುಗಳಲ್ಲಿ ರೇಖಾವಿನ್ಯಾಸ, ಸಾಂಕೇತಿಕ ಮೌಲ್ಯ ಮತ್ತು ಸೃಜನಶೀಲತೆ ಜನಸಾಮಾನ್ಯರಿಂದ ಸಾಕಷ್ಟು ಮನ್ನಣೆಯನ್ನು ಪಡೆಯದಿದ್ದರೂ ಕಲಾವಿದರನ್ನೂ ಬೆರಗುಗೊಳಿಸುವಂತಹದು.

## ಅಕಾಡೆಮಿಗಳ ಅಧ್ಯಕ್ಷ

ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಹೆಬ್ಬಾರರು 1977 ರಿಂದ 1980ರವರೆಗೆ ಸೇವೆ ಸಲ್ಲಿಸಿದರು. ಅವರ ಅವಧಿಯಲ್ಲಿ ಅಕಾಡೆಮಿ ಹೊಸ ದಿಕ್ಕಿನಲ್ಲಿ ಕೆಲಸ ಪ್ರಾರಂಭಿಸಿ, ರಾಷ್ಟ್ರಮಟ್ಟದಲ್ಲಿ ಕರ್ನಾಟಕ ಸಮಕಾಲೀನ ಕಲಾವಿದರು ಮನ್ನಣೆ ಪಡೆಯಲು ಸಾಧ್ಯವಾಯಿತು. ಅವರು ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಅಕಾಡೆಮಿ ಹಲವು ಹೊಸ ಯೋಜನೆಗಳನ್ನು ಹಮ್ಮಿಕೊಂಡಿತು. ಅವುಗಳಲ್ಲಿ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಬಹುಮಾನದ ಮೊತ್ತವನ್ನು ಒಂದೇ ಮಾಡಿದುದು ಒಂದು. ವಾರ್ಷಿಕ ಕಲಾಪ್ರದರ್ಶನದಿಂದ ಅಕಾಡೆಮಿಯು ಸಂಗ್ರಹಕ್ಕೆ ಪ್ರತಿ ವರ್ಷವೂ ಕಲಾಕೃತಿಗಳನ್ನು ಖರೀದಿಸುವ ಯೋಜನೆ ಪ್ರಾರಂಭವಾಗಿ ಹೀಗೆ ಸಂಗ್ರಹಿಸಿದ ಕಲಾಕೃತಿಗಳನ್ನು ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಸಂಘಟಿಸಿ, ಹೆಚ್ಚು ಜನರಿಗೆ ಕಲೆಯ ಪರಿಚಯವಾಗಲು ಸಾಧ್ಯವಾಯಿತು.

ನಮ್ಮಲ್ಲೂ ಪ್ರತಿಭಾನ್ವಿತರಿದ್ದಾರೆ. ಅವರಿಗೆ ಸೂಕ್ತ ಪ್ರೋತ್ಸಾಹ ಅಗತ್ಯ ಮತ್ತು ಅವರು ಇತರ ರಾಜ್ಯಗಳಿಗೆ ಹೋಗಿ ಕಲೆಯಲ್ಲಿ ಹೆಚ್ಚಿನ ಅಭ್ಯಾಸ ಮಾಡಲು, ಹೊರ ರಾಜ್ಯದಲ್ಲಿ ಲಲಿತಕಲೆ ಕಲಿಯಲು ಯೋಜನೆ ಪ್ರಾರಂಭಿಸಿದುದು ಗಮನಾರ್ಹ, ಇದರಿಂದ ಕರ್ನಾಟಕದಲ್ಲಿ ಸಮಕಾಲೀನ ಕಲೆಯಲ್ಲಿ ಹೊಸ ಅಲೆ ಪ್ರಾರಂಭವಾಯಿತು. ಅಕಾಡೆಮಿಯಿಂದ 'ಕಲಾಶಿಬಿರ' ಪ್ರಾರಂಭವಾಗಿ, ಈ ಶಿಬಿರದಲ್ಲಿ ಹೊರರಾಜ್ಯದ, ರಾಜ್ಯ ಕಲಾವಿದರು ಭಾಗವಹಿಸಿ, ಅವರ ಕೃತಿಗಳು ಅಕಾಡೆಮಿಯ ಸಂಗ್ರಹಕ್ಕೆ ಸೇರಿತು. ಇದರಿಂದ ರಾಜ್ಯದ ಕಲಾವಿದರ ಕೃತಿಗಳ ಪರಿಚಯ ಬೇರೆ ರಾಜ್ಯದ ಕಲಾವಿದರಿಗೆ ಆಗಿ, ವಿಚಾರ ವಿನಿಮಯಕ್ಕೆ ದಾರಿಯಾಯಿತು.

ರಾಜ್ಯದ ಕಲಾವಿದರಿಗೆ ಹೊರರಾಜ್ಯದಲ್ಲಿ ಮತ್ತು ರಾಜ್ಯದಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ, ಸಮೂಹ ಕಲಾಪ್ರದರ್ಶನ, ಏರ್ಪಡಿಸಲು ಧನಸಹಾಯ, ರಾಜ್ಯ ಕಲಾಶಾಲೆಗಳಲ್ಲಿ ಲಲಿತಕಲೆ ಕಲಿಯುತ್ತಿರುವವರೆಗೆ ಶಿಷ್ಯವೇತನ ಹಾಗೂ ಅಕಾಡೆಮಿಯ ಚಟುವಟಿಕೆಗಳನ್ನು ತಿಳಿಸುವ 'ಕಲಾವಾರ್ತೆ' ಪತ್ರಿಕೆಯ ಪ್ರಕಟಣೆ : ಮುಂತಾದ ಅನೇಕ ಯೋಜನೆಗಳನ್ನು ರೂಪಿಸಿ, ಅಕಾಡೆಮಿಗೆ ಹೊಸ ಚಾಲನೆ ನೀಡಿದರು. ಇದರಿಂದ ಕರ್ನಾಟಕದ ಕಲೆ ರಾಷ್ಟ್ರಮಟ್ಟದಲ್ಲಿ ಹೆಸರು ಪಡೆಯಿತು.

1980ರಿಂದ ನಾಲ್ಕು ವರ್ಷ ಕಾಲ ಕೇಂದ್ರ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ, ಪ್ರಥಮ ಬಾರಿಗೆ ಸಮಕಾಲೀನ ಕಲಾವಿದರೊಬ್ಬರಿಗೆ ಸ್ಥಾನ ಲಭ್ಯವಾಯಿತು. ಅಲ್ಲಿ ಅಧ್ಯಕ್ಷರಾಗಿದ್ದಾಗ ರಾಷ್ಟ್ರೀಯ ಕಲಾಪ್ರದರ್ಶನದ ವ್ಯವಸ್ಥೆಯನ್ನು ಬದಲಾಯಿಸಿ, ರಾಜ್ಯದ ಅಕಾಡೆಮಿಗಳ ಮೂಲಕವೂ ಕಲಾಕೃತಿಗಳನ್ನು ಕಳುಹಿಸುವ ಪದ್ಧತಿ ಜಾರಿಗೆ ಬಂದು, ಇದರಿಂದ ಪ್ರತಿವರ್ಷವೂ ರಾಜ್ಯಗಳ ವಿವಿಧ ಭಾಗಗಳಲ್ಲಿ ರೀಜನಲ್ ಸೆಂಟ್ರಲ್‌ಗಳ ಸ್ಥಾಪನೆ. ಕಲ್ಕತ್ತ ಮತ್ತು ಲಕ್ನೋಗಳಲ್ಲಿ ಕಲಾವಿದರಾಗಿ, ಪೂರ್ಣ ಪ್ರಮಾಣದ ಸ್ಟುಡಿಯೋ; ಗ್ರಾಫಿಕ್ ಮತ್ತು ಶಿಲ್ಪ ಮುಂತಾದವುಗಳ ಕಾರ್ಯಗಾರಗಳ ಸ್ಥಾಪನೆ. ಇದರಿಂದ ಆ ಭಾಗದ ಕಲಾವಿದರು ಕಲಾಪ್ರದರ್ಶನಗಳನ್ನು ನೋಡುವ ಮತ್ತು ಅಲ್ಲೇ ಇದ್ದು ಕಲಿಯಲು ಸಹಾಯಕವಾಗಿದೆ. ಇದರ ಕಾಲದಲ್ಲೇ ಮದರಾಸಿನ ರೀಜನಲ್ ಸೆಂಟರಿನ ಎರಡನೇ ಘಟ್ಟ ಪೂರ್ಣವಾಯಿತು.

## ಪ್ರಶಸ್ತಿಗಳು



ಕಲಾವಿದರ ಬಾಳಿನಲ್ಲಿ, ಅವರ ಕೃತಿಗಳಿಗೆ, ಕಲಾಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗೆ ಸಮಾಜ, ಸರ್ಕಾರ ಗೌರವಿಸುವುದು ಪದ್ಧತಿ. ಹೆಬ್ಬಾರರ ಕಲಾ ಜೀವನದ ಪಥದಲ್ಲಿ ಅವರ ಕೃತಿಗಳಿಗೆ, ಅವರ ಕಲಾಸೇವೆಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಇವುಗಳಲ್ಲಿ ಮುಖ್ಯವಾದುದು 1941ರಲ್ಲಿ ಅಕಾಡೆಮಿ ಫೈನ್ ಆರ್ಟ್ಸ್, ಕಲ್ಕತ್ತಾ ಇವರಿಂದ ಸ್ವರ್ಣ ಪದಕ; 1947ರಲ್ಲಿ ಬಾಂಬೆ ಆರ್ಟ್ ಸೊಸೈಟಿಯ ಸ್ವರ್ಣ ಪದಕ; 1948ರಲ್ಲಿ ಚಿತ್ರಕಲೆಯಲ್ಲಿನ ಸೇವೆಗಾಗಿ ಭಾರತ ಸರ್ಕಾರದಿಂದ 2500 ರೂಪಾಯಿಗಳ ವಿಶೇಷ ಪ್ರಶಸ್ತಿ; 1956ರಲ್ಲಿ ಮುಂಬಯಿ ರಾಜ್ಯದ ಪ್ರಶಸ್ತಿ; 1957,58ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಕಲಾಪ್ರದರ್ಶನಗಳಲ್ಲಿ ಪ್ರಶಸ್ತಿ; 1961ರಲ್ಲಿ ಕೇಂದ್ರ ಸರಕಾರದಿಂದ 'ಪದ್ಮಶ್ರೀ'; 1976ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯಿಂದ ಕಲಾವಿದರಿಗೆ ನೀಡುವ ಅತ್ಯುನ್ನತ ಗೌರವ 'ಫೆಲೋಷಿಪ್' ಮತ್ತು ಅದೇ ವರ್ಷ ಕಲೆಗಾಗಿ ಸಲ್ಲಿಸಿರುವ ಸೇವೆಗಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್; 1984ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ; 1985ರಲ್ಲಿ ಕರ್ನಾಟಕ ಸರ್ಕಾರದ ಪ್ರಶಸ್ತಿ, 1989ರಲ್ಲಿ ಭಾರತ ಸರ್ಕಾರದಿಂದ 'ಪದ್ಮಭೂಷಣ' ಪ್ರಶಸ್ತಿ ಮುಂತಾದವು. ಹೀಗೆ ಹಲವು ಪ್ರಶಸ್ತಿ, ಗೌರವಗಳನ್ನು ಗಳಿಸಿದ್ದರು.

ಹೆಬ್ಬಾರರ ಧೋರಣೆಗಳು ಬದಲಾಗಿರಲಿಲ್ಲ. ಅವರು 1980ರಲ್ಲಿ ರಚಿಸಿದ ಚಿತ್ರಗಳಲ್ಲಿ ಇವುಗಳನ್ನು ಕಾಣಬಹುದು. ಶಾಂತಿಯ ಬಗ್ಗೆ ಅವರು ರಚಿಸಿದ ಚಿತ್ರದಲ್ಲಿ ಒಂದು ಕಡೆ **'ಶಾಂತಿ'**ಯ ಸಂಕೇತವಾಗಿ ಬುದ್ಧನ ಪಾದಗಳು, ಅವುಗಳ ಬಗ್ಗೆ ನಮಗಿರುವ ಭಕ್ತಿಯ ಸಂಕೇತ ಹಾಗೂ ಪರಂಪರೆಯಿಂದ ಬಂದ ಸಂಸ್ಕೃತಿ, ಮತ್ತೊಂದು ಕಡೆ ಅಂತರಿಕ್ಷಕ್ಕೆ ಹಾರುತ್ತಿರುವ ರಾಕೆಟ್, ವಿಜ್ಞಾನದಿಂದ ನಾವು ಎಷ್ಟು ಮುಂದುವರೆದರೂ, ಶಾಂತಿಯು ಅವಶ್ಯವೆಂಬುದು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಆಧುನಿಕ ವಿಜ್ಞಾನದ ತಾಂತ್ರಿಕತೆ, ಇಂದು ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಸಾಧ್ಯ. ಟೆಕ್ನಾಲಜಿ ಬೆಳವಣಿಗೆ ನಮಗೆ ತುಂಬಾ ಅಗತ್ಯ. ಆದರೆ ಆ ದಿಸಿಯ ಪ್ರಗತಿ ಒಮ್ಮೆ ಸರ್ವನಾಶಕ್ಕೂ ಸಿದ್ಧವಾಗಿ ಭಯಾನಕ ರೂಪದಿಂದ ಬೆದರಿಸುತ್ತಿದೆ. ಇದು ಅವರ ಮೇಲೆ ಪ್ರಭಾವ ಬೀರಿ ಚಿತ್ರದಲ್ಲಿ ಮೂಡಿಸಿದ್ದಾರೆ.

ಯುದ್ಧದ ಭೀಕರತೆ, ನೋವು, ದುಃಖಗಳ ಪ್ರತಿಪಾದನೆಯನ್ನು ಅವರ "ಜೀವನ ಮರಣ" ಎಂಬ ಚಿತ್ರದಲ್ಲಿ ಕಾಣಬಹುದು. ನಾವು ಸಂಶೋಧನೆಯನ್ನು ಸ್ವಾಗತಿಸಬೇಕು. ಅದರಿಂದ ಆಗುವ ಅನಾಹುತವನ್ನಲ್ಲ.

ಈ ಚಿತ್ರದಲ್ಲಿ ಹೆಬ್ಬಾರರು ಅಣುಬಾಂಬಿನಿಂದ ಆಗುವ ಅನಾಹುತವನ್ನು ಚಿತ್ರಿಸಿದ್ದಾರೆ. ಉದ್ಯಾನವನದಲ್ಲಿ ಸಂತೋಷದಿಂದ ಮಕ್ಕಳು ಆಟವಾಡುತ್ತಿರುವುದು. ಬಣ್ಣದ ಹೂಗಳು, ವ್ಯಕ್ತಿಗಳನ್ನು ರೇಖೆಗಳ ಮೂಲಕ ಚಿತ್ರಿಸಿದ್ದಾರೆ. ಇಲ್ಲಿ ರೇಖೆ, ಆಕಾರ ಮತ್ತು ಬಣ್ಣಗಳು ಪ್ರಧಾನವಾಗಿದ್ದು, ಅಣುಬಾಂಬು ಹೇಗೆ ಸಂತೋಷವಾಗಿರುವ ನಮ್ಮ ಬದುಕನ್ನು ನಾಶಪಡಿಸುತ್ತದೆ ಎಂಬುದನ್ನು ಕಾಣಬಹುದು. ಇದರಿಂದ ಕೇವಲ ಒಬ್ಬ ವ್ಯಕ್ತಿಯಾಗಲೀ ಅಥವಾ ಒಂದು ದೇಶವಾಗಲೀ ನಾಶವಾಗುವುದಿಲ್ಲ. ಇಡೀ ಮಾನವ ಕುಲವೇ ನಾಶವಾಗುವುದು ಎಂಬುದನ್ನು ಸೂಚಿಸುವ ಆಕೃತಿಗಳು. ಸಂಕೇತಗಳು ಅವರ ಅನುಭವ ಮತ್ತು ಸ್ವಂತಿಕೆಯ ಪ್ರತಿಬಿಂಬಗಳಾಗಿವೆ.

**'ಶಕ್ತಿ'** ಮಾಲಿಕೆಯಲ್ಲಿ ಮಾನವನ ಬದುಕಿನಲ್ಲಿ ಶಕ್ತಿಯ ಉಪಯೋಗ ಮತ್ತು ಜೀವನವೆಂದರೆ ಶಕ್ತಿ ಎಂಬ ಉದ್ದೇಶ ಹೊಂದಿದ್ದರು. ಒಂದು ಕಲಾಕೃತಿಯಲ್ಲಿ ಸೂರ್ಯನಿದ್ದು, ಮೇಲ್ಭಾಗದಲ್ಲಿ ಶಕ್ತಿಯ ಸಂಕೇತವನ್ನು ತಿಳಿನೀಲಿ, ಮೆದು ಕೆಂಪು ವರ್ಣಗಳಲ್ಲಿ ಚಿತ್ರಿಸಿದ್ದಾರೆ. ಪ್ರಕೃತಿಯಲ್ಲಿ ಒಂದು ಶಕ್ತಿ ಇದೆ. ಇದರಿಂದ ಎಲ್ಲಾ ನಡೆಯುವುದು ಮತ್ತು ಅದಕ್ಕೆ ಒಂದು ಚೇತನವಿದೆ ಎಂಬುದನ್ನು ಕಾಣಬಹುದು. "ಕಲಾಕೃತಿಯು ಯಾವುದೇ ರೀತಿಯ ಕೃತ್ರಿಮ ಆಡಂಬರವಿಲ್ಲದೆ-ಸ್ವಯಂ ಸ್ಫೂರ್ತಿಯಿಂದ ರೂಪುಗೊಂಡರೆ, ಆ ಕಲಾಕೃತಿಯು ಕಲಾವಿದನ ವ್ಯಕ್ತಿತ್ವದ ಗುಣ ಲಕ್ಷಣವನ್ನು, ಅವನ ರಾಷ್ಟ್ರೀಯತೆಯ ಅಂತಃಸತ್ವವನ್ನು ನಿರೂಪಿಸುತ್ತದೆ ಎಂದು ನಾನು ನಂಬಿದ್ದೇನೆ. ಕಲಾಕೃತಿಯಲ್ಲಿ ಕೃತಕವಾದ ಯಾವುದೇ ಒಂದು ವಿಭಿನ್ನ ವಸ್ತುವನ್ನೋ ಮತ್ತು ನವೀನತೆಯನ್ನೋ ನಿರೂಪಿಸಿದರೆ, ರಸ ಭಾವಾತಿರೇಖಕ್ಕೆ ಒಳಗಾಗಬಹುದೇನೊ ನಿಜ. ಆದರೆ ಅದು ಕ್ಷಣಿಕ. ನನ್ನ ನಿರ್ಣಯವಿಷ್ಟೆ ನಾನು ನನ್ನದೇ ಆದ ನಮ್ರ ಪರೀಕ್ಷೆಗೆ ಗುರಿಯಾಗುವುದರಲ್ಲಿ ನನಗೆ ನಂಬಿಕೆ ಇದೆ; ನಂಬಿಕೆ ಇಡಬೇಕು. ನನ್ನ ಪರಿಸರ ಕುರಿತು ನನ್ನಲ್ಲಿ ಉಮ್ಮಳಿಸುವ ಗಾಢ ಸಂವೇಧನೆಯೇ ನನ್ನ ಕಲಾಕೃತಿಗಳ ಮೂಲ ಸೂತ್ರ. ನನ್ನ ಅಂಥಃಸತ್ವವನ್ನು ಶೋಧಿಸುತ್ತೇನೆ ಮತ್ತು ಅದರ ಆಜ್ಞೆಯಂತೆ ನಡೆಯುತ್ತೇನೆ" ಎನ್ನುವ ಹೆಬ್ಬಾರರು ಕಲೆಯಲ್ಲಿ ಸದಾ ಅನ್ವೇಷಕರಾಗಿದ್ದರು.



1986ರಲ್ಲಿ ಚಿತ್ರಿಸಿರುವ 'ನಾಗಮಂಡಲ' ಕೃತಿಯಲ್ಲಿ ನಾಗರ ಹಾವೊಂದು ಚಿತ್ರವನ್ನೆಲ್ಲಾ ಆಕ್ರಮಿಸಿ ಪೂರ್ಣ ಸ್ಥಾನವನ್ನು ಪಡೆದಿದೆ. ನಾಗದೇವತೆಯಿಂದ ಹಿಡಿಯಲ್ಪಟ್ಟ ವ್ಯಕ್ತಿ ತನ್ನ ಕೈಗಳಲ್ಲಿ ಅರಿಕೆನಟ್ (ಎವಿಃಅಂಟಿಗಖಿ) ಹೂಗಳ ಗೊಂಚಲನೊಂದಿಗೆ ನಿಂತಿದ್ದು, ತಲೆಯಿಂದ ಪಾದದವರೆಗೆ

ಅಲುಗಾಡುವುದನ್ನು ತೋರಿಸಲಾಗಿದೆ. ಸಂದರ್ಭಾನುಸಾರ ನೃತ್ಯಗಾರರು ನಾಗನನ್ನು ಹೊಗಳುತ್ತಾರೆ. ಚಿತ್ರಕಲೆಯ ದೈವಿಕ ವಿಷಯವು ಇಲ್ಲಿ ಹೆಚ್ಚಾಗಿದ್ದು ರಚನಾತ್ಮಕ ಗುಣಗಳನ್ನು ಕಾಣಬಹುದು.

ಅವರು ಶಕ್ತಿಯ ಬಗ್ಗೆ ಆಲೋಚಿಸಿ, ಅದರ ಮೂಲಗಳಾದ ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶಗಳ ಬಗ್ಗೆ ಕೃತಿಗಳನ್ನು ರಚಿಸಿದ್ದು, ಅವುಗಳನ್ನು ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. 'ಶಕ್ತಿ' ಮತ್ತು 'ಸರ್ಚಿಂಗ್ ಫಾರಂ' ಈ ಅವಧಿಯ ಕೃತಿಗಳಾಗಿದ್ದು ಈ ಕಲಾಕೃತಿಗಳನ್ನು ಕಾರ್ಯರೂಪಕ್ಕೆ ತರುವಾಗ, ಅವರ ಮನೋಭಾವನೆ, ಬುದ್ಧಿಶಕ್ತಿ ಮತ್ತು ಅಂತರ್‌ದೃಷ್ಟಿಯಿಂದ ಏಕಕಾಲದಲ್ಲಿ ನಡೆದಿದೆ.

ಬಡತನ, ಹಸಿವು, ನಿರ್ಗತಿಕ ವಸ್ತುಗಳ ಅನೇಕ ಚಿತ್ರಗಳನ್ನು ಹೆಬ್ಬಾರರು ರಚಿಸಿದ್ದು, ಅವರ ಸುತ್ತಲಿನ ಸಾಮಾನ್ಯ ಜನರ ಮತ್ತು ಬಡವರ, ಗ್ರಾಮೀಣ ಜನಪದದೊಲಗೆ ಅಡಗಿರುವ ಕ್ರಿಯಾತ್ಮಕ ಜೀವನ ಸ್ಫೂರ್ತಿಯನ್ನ ಹೊರತರಲು ಪ್ರಯತ್ನಿಸಿದ್ದಾರೆ. ಅಂತರಿಕ ಚಿಂತನೆ ಮತ್ತು ಹುಡುಕುವಿಕೆಯ ಸಾಧ್ಯತೆಯನ್ನು ಬೆಳೆಸುವ ಪ್ರಶಾಂತತೆ ಹಾಗೂ ನಿರ್ಲಿಪ್ತತತೆ ಮೇಲುಗೈ ಸಾಧಿಸುವ ಜೀವನ ಕಾಲಘಟ್ಟವನ್ನು ಅವರು ಬಿಂಬಿಸುವುದನ್ನು ಅವರ ಧ್ಯೇಯವಾಗಿದ್ದು, ಶಾಂತತೆ ಮತ್ತು ಕ್ರಿಯಾಶೀಲತೆಗೆ ಸಹಾಯವಾಗಿದೆ. ತಾತ್ವಿಕತೆಯಿಂದ ಕಾಲ್ಪನಿಕ ಸಂಬಂಧದವರೆಗೆ ಅವರ ಕಲ್ಪನೆಯ ಉತ್ಕರ್ಷವನ್ನು ಚಿತ್ರಿಸಿರುವ ಹೆಬ್ಬಾರರು ಪರಿಸರದ ತೀವ್ರ ಭಾವನೆಗಳಿಂದ ಅವರ ಕೃತಿಗಳು ಸೃಷ್ಟಿಯಾಗಿವೆ. ಅವರಿಗೆ ಅವರೇ ಅನ್ವೇಷಿಸಲು ಪ್ರಯತ್ನಿಸಿದ್ದು ಹಾಗೂ ಇದು ಎಲ್ಲಾ ಕಡೆ ಅವರಿಗೆ ಮಾರ್ಗದರ್ಶಕವಾಗಿದೆ.

ಮೈನವಿರೇಳಿಸುವಂಥ ಪ್ರಾಚೀನ ವೈಭವ ಮತ್ತು ಸುಧೀರ್ಘವಾದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಹೆಬ್ಬಾರರು ನಡೆದುಬಂದ ದಾರಿಯನ್ನು ಅವಲೋಕಿಸಿದಾಗ, ಅವರ ಸಾಧನೆ ಅಪಾರ. ಪ್ರಾಮಾಣಿಕ ಕಲಾವಿದರಾದ ಹೆಬ್ಬಾರರು ಸಮಾಜದಿಂದ ದೂರ ಸರಿದು ಒಂಟಿಯಾಗಿದ್ದು ಕೊಂಡು ತಮ್ಮ ಕಲಾ ಲೋಕದಲ್ಲಿ ಮಗ್ನರಾಗಿರುವ ವ್ಯಕ್ತಿಯಾಗಿರಲಿಲ್ಲ. ತಾವು ಹುಟ್ಟು ಬೆಳೆದ ಸಮಾಜದ ಆಗುಹೋಗುಗಳನ್ನು ನೋವು-ನಲಿವುಗಳನ್ನು ಬರೆಯುವವರು ಹಾಗೂ ತಮ್ಮ ಸುತ್ತಮುತ್ತಲ ಪರಿಸರದೊಳಗೆ ಸೌಹಾರ್ದಯುತವಾದ ನಿರಂತರ ಸಂಪರ್ಕವನ್ನಿಟ್ಟು-ಕೊಂಡಿದ್ದವರಾಗಿದ್ದರು.

## ವರ್ಣಶಿಲ್ಪಿ ಕೆ. ವೆಂಕಟಪ್ಪ ಪ್ರಶಸ್ತಿ

ಭಾರತದ ಹಾಗೂ ರಾಜ್ಯದ ಹೆಸರಾಂತ ಕಲಾವಿದರಾಗಿದ್ದ ದಿ॥ ಕೆ. ವೆಂಕಟಪ್ಪ ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರವು ಪ್ರಶಸ್ತಿಯನ್ನು ಸ್ಥಾಪಿಸಿ, ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ವರ್ಣಶಿಲ್ಪಿ ಕೆ. ವೆಂಕಟಪ್ಪ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಥಮ ಪ್ರಶಸ್ತಿಯನ್ನು 1995ರಲ್ಲಿ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದ ಹೆಸರಾಂತ ಕಲಾವಿದರಾದ ಕೆ.ಕೆ. ಹೆಬ್ಬಾರ್ ರವರಿಗೆ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ಮಹಾನ್ ಕಲಾವಿದ, ಸರಳ ಸಜ್ಜನಿಕೆ, ಮಾನವೀಯ ಕಾಳಜಿಯ ಅರ್ಹ ಕಲಾವಿದನಿಗೆ ಸಂದ ಗೌರವವಾಗಿದೆ.

## ಹೆಬ್ಬಾರ್ ವಿಭಾಗ

